ಅಧ್ಯಾತ್ಮಗ್ರಂಥಾವಳಿ

ಶ್ರೀಚಿದಾನಂದಾವಧೂತವಿರಚಿತ

# ಚಿದಾನಂದರಗಳೆ

ಮತ್ತು

## ಬಗಳಾಬ್ರಹ್ಮೈಕ್ಯಸ್ತೋತ್ರ

ಸಂಸ್ಕರಿಸಿದವರು :
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೬೪

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ.
1959

# ವಾಚಕರಲ್ಲಿ ಬಿನ್ನಹ

ಈ 'ಚಿದಾನಂದರಗಳೆ' ಎಂಬ ಗ್ರಂಥದ ಕೈಬರಹದ ಓಲೆಪ್ರತಿಯನ್ನು ಈಗ ಕೃಷ್ಣರಾಜನಗರದಲ್ಲಿ ಸ್ಯಾನಿಟರಿ ಇನ್‌ಸ್ಪೆಕ್ಟರಾಗಿರುವ ಶ್ರೀಯುತ **ಕೆ. ಎನ್. ನಾರಾಯಣರಾಯರವರು** ದಯವಿಟ್ಟು ಕಳುಹಿಸಿಕೊಟ್ಟರು. ಆ ಕೈಬರಹದ ಪುಸ್ತಕದಲ್ಲಿ **"ಚಿದಾನಂದ ಸವಾಯಿ"** ಎಂಬ ಮತ್ತೊಂದು ಗ್ರಂಥವೂ ಕಂಡುಬರುತ್ತದೆ. "ರಗಳೆ"ಯ ಪ್ರತಿಯು ಇನ್ನೊಂದು ಸಿಕ್ಕೀತೇನೋ ಎಂದು ಅಲ್ಲಲ್ಲಿ ವಿಚಾರಮಾಡಿ ನಿರೀಕ್ಷಿಸಿದರೂ ಇದುವರೆಗೆ ಅದು ಲಭ್ಯವಾಗಲಿಲ್ಲ. ಆದ್ದರಿಂದ ಗ್ರಂಥವನ್ನು ಇದ್ದಹಾಗೆ ಲೇಖಕಪ್ರಮಾದಗಳನ್ನು ಮಾತ್ರ ತಿದ್ದಿ ಅಚ್ಚಿಗೆ ಕೊಟ್ಟಿರುತ್ತೇನೆ.

ಗ್ರಂಥಕರ್ತರ ಹೆಸರು **'ಚಿದಾನಂದಾವಧೂತರು'** ಎಂದು ಅದರಲ್ಲಿಯೇ ಸ್ಪಷ್ಟವಾಗಿ ಉಲ್ಲೇಖವಿದೆ. ಅವರು **'ಬಗಳಾಂಬಾ'**ದೇವಿಯ ಭಕ್ತರೆಂದು ಆದಿಭಾಗದಲ್ಲಿಯೇ ವ್ಯಕ್ತವಾಗುತ್ತದೆ. ಆದ್ದರಿಂದ ಆ ದೇವಿಯ ಭಕ್ತರಿರುವ ಕನ್ನಡನಾಡಿನ ಭಾಗದ ವೇದಾಂತಿಗಳಲ್ಲಿ ಇವರ ಪ್ರತಿಗಳು ದೊರೆತಾವೆಂಬ ಆಶೆಯಿದೆ. ಗ್ರಂಥಕರ್ತರು ಸುಪ್ರಸಿದ್ಧ **'ಜ್ಞಾನಸಿಂಧು'**ವನ್ನು ಬರೆದವರೇ ಎಂದು ಕಾಣುತ್ತದೆ. ಶೋಧಕರು ಇದರ ನಿಜವನ್ನು ಗೊತ್ತುಪಡಿಸಬೇಕಾಗಿದೆ. ಶೈಲಿಯು ಬಹುಮಟ್ಟಿಗೆ ಆಡುವ ಭಾಷೆಯಿಂದ ಮಿಶ್ರವಾಗಿರುತ್ತದೆ. 'ಪರಿಪೂರ್ಣಹ', 'ಓಡ್ಯಾಡೆ', 'ಪಾಣಿಡು'– ಈ ಬಗೆಯ ಸಂಧಿಗಳು ಹೇರಳವಾಗಿವೆ; 'ಥಾಡ', 'ನಿರಾಳ', 'ದಾರು'– ಮುಂತಾದ ಪ್ರಯೋಗಗಳಿರುವದರಿಂದ ಬರೆದವರು ಉತ್ತರಕರ್ಣಾಟಕದವರಾಗಿರಬೇಕೆಂದು ತೋರುತ್ತದೆ. ಛಂದಸ್ಸಿಗಾಗಿ ಹ್ರಸ್ವವನ್ನು ದೀರ್ಘವಾಗಿಯೂ ದೀರ್ಘವನ್ನು ಹ್ರಸ್ವವಾಗಿಯೂ ಭಾವಿಸಿರುತ್ತಾರೆ; 'ಭಾಳ್ಸಂತೋಷ', 'ಹಂಕರ'– ಇಂಥ ಪ್ರಯೋಗಗಳೂ ಛಂದಸ್ಸಿಗಾಗಿಯೇ ಆದವುಗಳೆಂದು ಹೇಳಬಹುದಾಗಿದೆ.

ಕಾವ್ಯದೃಷ್ಟಿಯಿಂದ ಉತ್ತಮತರಗತಿಗೆ ಸೇರುವ ಗ್ರಂಥವಲ್ಲದಿದ್ದರೂ ವಿಚಾರಪರರು ಬರೆದುಕೊಂಡು ಓದಿಕೊಳ್ಳುವಷ್ಟು ಪೂಜ್ಯಸ್ಥಾನವನ್ನು ಹೊಂದಿರುವ ಈ ಕೃತಿಯನ್ನು ವಿಷಯದೃಷ್ಟಿಯಿಂದ ಪರಿಶೀಲಿಸಿ ನೋಡಬೇಕಾದದ್ದು ಯುಕ್ತವೇ ಅಷ್ಟೆ? ಈ ದೃಷ್ಟಿಯಿಂದ ಗ್ರಂಥವನ್ನು ಐದು ವಿಭಾಗಗಳಾಗಿ ವಿಂಗಡಿಸಬಹುದಾಗಿರುತ್ತದೆ.

ಮೊದಲನೆಯ ಭಾಗವು ಪೀಠಿಕೆಯು. "ಚಿದಾನಂದಾವಧೂತನು ಆತ್ಮಾನಂದದಲ್ಲಿದ್ದುಕೊಂಡು ಒಮ್ಮೆ ಬಹಿರ್ಮುಖನಾಗಿ ಈ ಗ್ರಂಥವನ್ನು ರಚಿಸಿದನು. ಅಧಿಕಾರಿಗುಣಗಳಿಂದ ಕೂಡಿದವರು ಸಾವಧಾನನಾಗಿ ಇದರಲಿ ಹೇಳಿರುವ

ಪರತತ್ತ್ವವನ್ನು ಶ್ರವಣಮಾಡಿದರೆ ಜನನಮರಣಗಳನ್ನು ಸುಟ್ಟು ಸಂಸಾರದಿಂದ ಪಾರಾಗಬಹುದು"– ಎಂಬುದು ಅದರ ಸಾರಾರ್ಥವು. ಎರಡನೆಯ ಭಾಗದಲ್ಲಿ "ಒಬ್ಬ ಅಧಿಕಾರಿಯಾದ ಶಿಷ್ಯನು ಅಜ್ಞಾನವನ್ನು ಕಳೆದುಕೊಳ್ಳಬೇಕೆಂದು ಸದ್ಗುರುವನ್ನು ಆತ್ಮವಿಷಯಕವಾಗಿ ಪ್ರಶ್ನೆಮಾಡಿದನು" ಎಂಬ ಭಾವವಿದೆ. ಮೂರನೆಯ ಭಾಗದಲ್ಲಿ "ಜ್ಞಾನವು ವೈರಾಗ್ಯವಿಲ್ಲದೆ ಆಳವಡುವದಿಲ್ಲ; ಆದ್ದರಿಂದ ವೈರಾಗ್ಯವನ್ನು ಗಟ್ಟಿಗೊಳಿಸಿಕೊ" ಎಂದು ಗುರುವು ಶಿಷ್ಯನಿಗೆ ಉಪದೇಶಿಸಿರುತ್ತಾನೆ.

ನಾಲ್ಕನೆಯ ಭಾಗದಲ್ಲಿ ಮುಖ್ಯವಾದ ಉಪದೇಶವಿದೆ. "ಕಾಮಕ್ರೋಧಗಳನ್ನು ಬಿಟ್ಟು ಶಮದಮಾದಿಗಳನ್ನಳವಡಿಸಿಕೊಂಡು ನಿನ್ನಲ್ಲಿ ನಿನ್ನನ್ನೇ ನೋಡಿಕೊಂಡರೆ ನೀನು ಶುದ್ಧಾತ್ಮನೆಂದೂ ಮಾಯೆಯಿಂದ ನಿನ್ನಲ್ಲಿ ಈ ಪ್ರಪಂಚವು ತೋರುವದೆಂದೂ ಸ್ಪಷ್ಟವಾಗಿ ತಿಳಿದುಬರುತ್ತದೆ. ಮಾಯೆಯಿಂದ ಸ್ಥೂಲ, ಸೂಕ್ಷ್ಮ, ಕಾರಣ, ಮಹಾಕಾರಣ– ಎಂಬ ನಾಲ್ಕು ಶರೀರಗಳಾಗಿರುತ್ತವೆ; ಇವುಗಳಲ್ಲಿ ಸ್ಥೂಲಶರೀರವು ತೋರಿ ತೋರಿ ನಾಶವಾಗುತ್ತಿರುವದು, ಸೂಕ್ಷ್ಮಶರೀರವು ವಾಸನೆಯ ಬಲದಿಂದ ಸಂಸಾರದಲ್ಲಿ ತಿರುಗುತ್ತಿರುವದು, ಸೂಕ್ಷ್ಮಶರೀರಕ್ಕಾಗುವ ಜನ್ಮಾಂತರಲೋಕಾಂತರಗಳೂ ಸುಖದುಃಖಗಳೂ ನಿನಗಿಲ್ಲ, ನೀನು ಗಡಿಗೆಯೊಳಗೆ ಸಿಕ್ಕಿಕೊಂಡಂತಿರುವ ಆಕಾಶದಂತೆ ಶುದ್ಧನಾಗಿಯೇ ಇರುತ್ತೀಯೆ. ಲಿಂಗಶರೀರದ ಅಥವಾ ಸೂಕ್ಷ್ಮಶರೀರದ ಆವರಣದಿಂದಲೇ ನೀನು ಜೀವನೆನಿಸಿಕೊಂಡಿದ್ದೀಯೆ, ಲಿಂಗಭಂಗವಾದರೆ ಶುದ್ಧಾತ್ಮನೇ ಆಗಿರುತ್ತೀಯೆ. ಆದ್ದರಿಂದ ಈ ಜೀವತ್ವವು ಆರೋಪಿತವಾಗಿರುತ್ತದೆ. ಅಜ್ಞಾನದಿಂದ ಜೀವನೆನಿಸಿಕೊಂಡು ಜ್ಞಾನದಿಂದ ಈಶ್ವರನೆನ್ನಿಸಿಕೊಳ್ಳುವ ನೀನು ಪರಮಾರ್ಥವಾಗಿ ಜೀವನೂ ಅಲ್ಲ, ಈಶ್ವರನೂ ಅಲ್ಲ. ಹರಿಹರಬ್ರಹ್ಮರೆಂಬ ತ್ರಿಮೂರ್ತಿಗಳೂ ನಿನ್ನಲ್ಲಿ ಕಲ್ಪಿತರಾಗಿರುತ್ತಾರೆ. ಆದ್ದರಿಂದ ನೀನೊಬ್ಬನೇ ಪರಮಾರ್ಥಸತ್ಯನು, ಮಿಕ್ಕದ್ದೆಲ್ಲವೂ ನಿನ್ನಲ್ಲಿ ಆರೋಪಿತವಾಗಿರುವದರಿಂದ ಮಿಥ್ಯವು. ನೀನು ಸೂಕ್ಷ್ಮವಾಗಿರುವದೆಲ್ಲಕ್ಕಿಂತಲೂ ಸೂಕ್ಷ್ಮವಾಗಿರುವ ಪರವಸ್ತುವಾಗಿದ್ದೀಯೆ; ನಿನ್ನಲ್ಲಿ ಎಚ್ಚರ, ಕನಸು, ನಿದ್ರೆ– ಎಂಬ ಮೂರವಸ್ಥೆಗಳೂ ತೋರಿಹಾರುತ್ತಿವೆ; ಅವುಗಳಿಗೆ ಸಾಕ್ಷಿಯಾಗಿರುವ ನೀನು ಯಾವಾಗಲೂ ಶುದ್ಧಚೈತನ್ಯವೇ ಆಗಿರುತ್ತೀಯೆ.

"ಆದ್ದರಿಂದ ಈ ತೋರುವ ಪ್ರಪಂಚವನ್ನು ಸತ್ಯವೆಂದು ನಂಬಬೇಡ; ಇದಕ್ಕೆಲ್ಲ ಸಾಕ್ಷಿಯಾಗಿರುವ ನೀನೇ ಸತ್ಯವೆಂದು ತಿಳಿದುಕೊ. ನೀನು ಮನುಷ್ಯನೆಂಬ ತಪ್ಪುತಿಳಿವಳಿಕೆಯನ್ನು ತೊಲಗಿಸಿಕೊ. 'ನಾನು ಪರಿಪೂರ್ಣಚೈತನ್ಯನು, ನನ್ನ ಚಿದ್ಘನರೂಪದಿಂದ ಪ್ರಕಾಶದ ಮಳೆಯು ಎಲ್ಲೆಲ್ಲಿಯೂ ಸುರಿಯುತ್ತಿರುವದು"– ಎಂದು ಅನುಸಂಧಾನಮಾಡು; ಈ ಅರ್ಥವನ್ನು ತಿಳಿಸುವ ಓಂಕಾರದ

ಇಂಪಿನ ನಾದವನ್ನು ಕೇಳುತ್ತಿರು; ಇದರಿಂದ ಪ್ರಕಾಶವಾಗು. ನಿನ್ನ ಸ್ವರೂಪ ವನ್ನು ಕಂಡುಕೊಂಡು ಅದರಲ್ಲಿಯೇ ಇದ್ದುಕೊಂಡಿರು. ಒಳಗೆ, ಹೊರಗೆ ಎಂಬ ಭೇದವನ್ನೇ ಮರೆತು ಸ್ವಚ್ಛನೂ ನಿರ್ವಿಕಾರನೂ ಆಗಿ ಬ್ರಹ್ಮಾನಂದವನ್ನು ಸವಿಯುತ್ತಾ ಜೇನುತುಪ್ಪವನ್ನು ಸವಿದು ವರ್ಣಿಸಲಾರದೆ ಇರುವ ಮೂಕನಂತೆ ಬ್ರಹ್ಮೈಕ್ಯವನ್ನು ಪಡೆ; ತುರ್ಯಾತೀತನೆಂದೆನಿಸಿ ಒಳಗಿನ ಕಣ್ಣನ್ನು ತೆರೆದುಕೊ; ಆ ಕಣ್ಣಿನಿಂದ ಈ ಜಗತ್ತೆಲ್ಲವನ್ನೂ ನೋಡಿ ಎಲ್ಲವೂ ನಾನೇ ಎಂಬುದನ್ನು ಅರಿತುಕೊ.

"ಈ ಅರಿವು ಉಂಟಾದರೆ ಆಮೇಲೆ ನಿನಗೆ ಕುಲ, ಗೋತ್ರ, ಕರ್ಮ, ಮಂತ್ರ, ಆಸನ, ದೇವತೆ, ಶಕುನ, ಅಪಶಕುನ- ಮುಂತಾದ ಯಾವ ಕಟ್ಟೂ ಉಳಿಯುವದಿಲ್ಲ; ಏಕೆಂದರೆ ನೀನು ಆಗ ಅದ್ವಿತೀಯವಾದ ವಸ್ತುವಾಗಿರುತ್ತೀಯೆ; ಆಗ ನೀನು ಹೇಳಿದ್ದೇ ವೇದ, ಉಂಡದ್ದೇ ನೈವೇದ್ಯ, ನೀನೇ ಸಾಕ್ಷಾತ್ಪರ ಮೇಶ್ವರನು. ಆಗ ನೀನು ಎಲ್ಲರಿಗಿಂತಲೂ ಧನ್ಯನು; ಎಲ್ಲರಿಗಿಂತ ಎಂದೇಕೆ ಹೇಳಬೇಕು? ನಿನಗಿಂತ ಬೇರೆ ಯಾವದೂ ಇರುವದೇ ಇಲ್ಲ" ಎಂದು ಗುರು ಬೋಧಿಸಿರುತ್ತಾನೆ.

ಐದನೆಯ ಭಾಗದಲ್ಲಿ ಶಿಷ್ಯನು ಕೃತಾರ್ಥನಾಗಿ ಗುರುವಿನ ಆಶೀರ್ವಾದ ವನ್ನು ಪಡೆದು ಜೀವನ್ಮುಕ್ತನಾಗಿ ವ್ಯವಹರಿಸುತ್ತಾ ಎಲ್ಲರನ್ನೂ ಅನುಗ್ರಹಿಸಿ ಪ್ರಾರಬ್ಧಕರ್ಮದ ಕೊನೆಯಲ್ಲಿ ಶರೀರವನ್ನು ಬಿಟ್ಟು ವಿದೇಹಮುಕ್ತನಾದನು- ಎಂಬುದನ್ನು ವರ್ಣಿಸಿರುತ್ತದೆ. ಈ ಗ್ರಂಥವನ್ನು ಎಲ್ಲಾ ಜಾತಿಯ ಹೆಂಗಸರೂ ಗಂಡಸರೂ ತಿಳಿವಳಿಕೆಯುಳ್ಳ ಹುಡುಗರುಕೂಡ ಶ್ರವಣಮಾಡಿ ಜ್ಞಾನವನ್ನು ಸಂಪಾದಿಸಬಹುದೆಂದೂ ಜ್ಞಾನಿಯು ಯಾವನೇ ಆದರೂ ಸರ್ವರಿಗೂ ಪೂಜ್ಯ ನೆಂದೂ ಹೇಳಿ ಗ್ರಂಥವನ್ನು ಉಪಸಂಹಾರಮಾಡಿರುತ್ತದೆ.

ಗ್ರಂಥದಲ್ಲಿ ಅವಸ್ಥಾತ್ರಯಸಾಕ್ಷಿತ್ವ, ಜಗನ್ಮಿಥ್ಯಾತ್ವ, ಮುಕ್ತನ ಸರ್ವಾತ್ಮತ್ವ -ಇಷ್ಟನ್ನು ಹೃದಯಂಗಮವಾಗಿ ವರ್ಣಿಸಿರುತ್ತದೆ. ಸ್ಥೂಲ, ಸೂಕ್ಷ್ಮ, ಕಾರಣ, ಮಹಾಕಾರಣ- ಎಂಬ ನಾಲ್ಕು ಶರೀರಗಳನ್ನು ವರ್ಣಿಸಿದ್ದರೂ ಸ್ಥೂಲಸೂಕ್ಷ್ಮ ಗಳನ್ನು ಮಾತ್ರ ವಿವರಿಸಿರುತ್ತದೆ. ಮಹಾಕಾರಣವೆಂಬ ನಾಲ್ಕನೆಯದನ್ನು 'ಸೋऽಹಂತನು'ವೆಂದು ಸಂಕ್ಷೇಪದಿಂದ ಹೇಳಿಬಿಟ್ಟಿರುತ್ತದೆ. ಸಿದ್ಧಾಂತಕ್ಕೆ ವಿರುದ್ಧವಾದ ವಿಷಯಗಳು ಯಾವವೂ ಇಲ್ಲಿ ಪ್ರತಿಪಾದಿತವಾದಂತೆ ಕಂಡು ಬರುವದಿಲ್ಲ. ಇಲ್ಲಿ ವಿರಕ್ತಿಯನ್ನು ಚೆನ್ನಾಗಿ ವರ್ಣಿಸಿರುತ್ತದೆ. ಗ್ರಂಥಕರ್ತರ ಪ್ರಕ್ರಿಯೆಯನ್ನು ವಿಚಾರಮಾಡುವದಕ್ಕೆ ಇದಕ್ಕಿಂತಲೂ ವಿಸ್ತಾರವಾದ ವಿವರವು ಬೇಕಾಗಿರುತ್ತದೆಯಾದ್ದರಿಂದ ಇಲ್ಲಿ ಆ ವಿಷಯದಲ್ಲಿ ಹೆಚ್ಚಿಗೆ ಹೇಳಲು ಅವಕಾಶವಿಲ್ಲ.

ಈ ಗ್ರಂಥಸಂಸ್ಕರಣದಲ್ಲಿ ಕಂಡುಬರುವ ನ್ಯೂನಾತಿರಿಕ್ತಗಳನ್ನು ಸುಜ್ಞರು ತಿಳಿಸಬೇಕೆಂದು ಬೇಡುತ್ತೇನೆ; ಇದರ ಪ್ರತಿಗಳು ಯಾರಲ್ಲಿಯಾದರೂ ದೊರೆತರೆ ಕಳುಹಿಸಿಕೊಟ್ಟರೆ ಮುಂದಿನ ಸಂಸ್ಕರಣಕ್ಕೆ ಕಂಡುಬರುವ ಉತ್ತಮಪಾಠಗಳನ್ನು ಕೃತಜ್ಞತೆಯಿಂದ ಉಪಯೋಗಿಸಿಕೊಳ್ಳುವೆನು. "ಚಿದಾನಂದಸವಾಯಿ"ಯನ್ನು ಸಂಸ್ಕರಿಸುತ್ತಿರುವೆನಾದ್ದರಿಂದ ಆ ಗ್ರಂಥದ ಪ್ರತಿಯು ಯಾರಲ್ಲಾದರೂ ದೊರೆತರೆ ಅದನ್ನೂ ಚಿದಾನಂದಾವಧೂತರ ವಿಷಯವಾಗಿ ಹೆಚ್ಚಿನ ತಿಳಿವಳಿಕೆಯು ಯಾರಲ್ಲಾದರೂ ದೊರೆತರೆ ಅದನ್ನೂ ನನಗೆ ಕಳುಹಿಸಿಕೊಟ್ಟು ಉಪಕಾರಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಈಶ್ವರಸಂವತ್ಸರ }
ಫಾಲ್ಗುನ ಬ॥ ೭ }

ಸಂಸ್ಕರ್ತ.

# ಎರಡನೆಯ ಸಂಸ್ಕರಣಕ್ಕೆ ಮುನ್ನುಡಿ

"ಚಿದಾನಂದರಗಳೆ"ಯನ್ನು ಅಚ್ಚುಮಾಡಿಸಿ ಇಪ್ಪತ್ತು ವರ್ಷಗಳ ಮೇಲಾಯಿತು. ಆದರ ಪ್ರತಿಯು ಮತ್ತೊಂದು ಸಿಕ್ಕಲಿಲ್ಲವಾದ್ದರಿಂದ ಅಚ್ಚಿನ ತಪ್ಪುಗಳನ್ನು ತಿದ್ದಿ ಮತ್ತೆ ಮುದ್ರಣಕ್ಕೆ ಕೊಡಲಾಗಿದೆ.

ಇದೇ ಗ್ರಂಥಕರ್ತರ "ಚಿದಾನಂದಸವಾಯಿ" ಎಂಬ ಗ್ರಂಥವು ಆಗಲೆ ಕಾರ್ಯಾಲಯದಿಂದ ಪ್ರಕಾಶಕ್ಕೆ ಬಂದಿರುತ್ತದೆ. ಈಗ ರಗಳೆಯ ಜೊತೆಗೆ 'ಬಗಳಾಬ್ರಹ್ಮೈಕ್ಯ'ವೆಂಬ ಪ್ರಸಿದ್ಧವಾದ ಮತ್ತೊಂದು ಹಾಡುಗಬ್ಬವನ್ನು ಸೇರಿಸಿರುತ್ತೇವೆ. ಈ ಎರಡು ಗ್ರಂಥಗಳೂ ಒಬ್ಬರವೇ ಎನ್ನುವದು ಬಹಳಮಟ್ಟಿಗೆ ವಿಶ್ವಾಸಾರ್ಹವಾಗಿರುತ್ತದೆ. ಗ್ರಂಥದ ಕೊನೆಯಲ್ಲಿರುವ ಪುಷ್ಪಿಕಾವಾಕ್ಯವು ಎರಡರಲ್ಲಿಯೂ ಒಂದೇ ಆಗಿರುತ್ತದೆ. ಇವರೇ 'ಬಗಳಾಬ್ರಹ್ಮೈಕ್ಯಸ್ತೋತ್ರ' ಮತ್ತು 'ದೇವೀಮಾಹಾತ್ಮ್ಯ' ಎಂಬ ಮತ್ತೆರಡು ಗ್ರಂಥಗಳನ್ನು ಬರೆದಿದಾರೆಂದು ಈಚೆಗೆ ತಿಳಿದುಬಂದಿದೆ. ಸ್ತೋತ್ರವು ಚೌಪದಿರೂಪದಲ್ಲಿದೆ; ಮಾಹಾತ್ಮ್ಯೆಯು ಭಾಮಿನೀಷಟ್ಪದಿಯ ರೂಪದಲ್ಲಿದೆ. ಈ ಎಲ್ಲ ಗ್ರಂಥಗಳಿಂದಲೂ ಚಿದಾನಂದರೆಂಬ ಗುರುಗಳ ಶಿಷ್ಯರಾದ 'ಚಿದಾನಂದಾವಧೂತ'ರೇ ಇವರೆಂದು ತಿಳಿಯಬರುತ್ತದೆ.

'ಬಗಳಾಬ್ರಹ್ಮೈಕ್ಯ' ಎಂಬುದೇ ಗ್ರಂಥದ ಹೆಸರೆ, 'ಚಿದಾನಂದಬಗಳಾಬ್ರಹ್ಮೈಕ್ಯ' ಎಂಬುದೇ ಅದರ ಹೆಸರೆ ? -ಎಂಬುದು ವಿಚಾರಣೀಯವಾಗಿದೆ. ಏಕೆಂದರೆ ಇಲ್ಲಿ ಗ್ರಂಥಕರ್ತರಾದ ಅವಧೂತರು, ಬಗಳಾಂಬ, ಬ್ರಹ್ಮ- ಈ ಮೂರರ ಐಕ್ಯವನ್ನೂ ಹೇಳಿದೆ. ಕೆಲವು ಕಡೆಗಳಲ್ಲಿ 'ಬಗಳೆ' ಎಂಬ ಮಾತನ್ನು ಭಕ್ತರು ಸೇರಿಸಿಕೊಂಡು ಬರೆದಿರುವದಾಗಿ ತೋರುತ್ತದೆ; ಆ ಮಾತನ್ನು ಬಿಟ್ಟರೂ 'ಚಿದಾನಂದದ್ವೈತ' ಎಂಬ ಪದದಿಂದಲೂ ಅದರ ವಿಶೇಷಣಗಳಿಂದಲೂ ಅಭಿಪ್ರಾಯವು ತಾನೇ ಸಿದ್ಧವಾಗುತ್ತದೆ. 'ಬಗಳೆ' ಎಂಬ ಮಾತನ್ನು ಸೇರಿಸಿದರೆ ಹಾಡುವದಕ್ಕೆ ಅಡ್ಡಿಯಾಗಿರುವ ಕಡೆಗಳಲ್ಲಿ ( ) ಹೀಗೆ ಕಂಸದಿಂದ ಗುರುತು

ಈಗ ಗ್ರಂಥವು ಮೊದಲಿಗಿಂತಲೂ ಹೆಚ್ಚು ವಾಚಕರಿಗೆ ಪ್ರಯೋಜನಕರ ವಾಗಿರುವದೆಂದು ನಂಬುತ್ತೇವೆ. ಈ ಎರಡು ಗ್ರಂಥಗಳ ಬೇರೆ ಕೈಬರಹದ ಪ್ರತಿಗಳಿದ್ದರೆ ದಯವಿಟ್ಟು ಒದಗಿಸಿಕೊಟ್ಟವರಿಗೆ ಕೃತಜ್ಞತೆ ಸೂಚಿಸಿ ಮತ್ತೊಂದು ಮುದ್ರಣದಲ್ಲಿ ಗ್ರಂಥವನ್ನು ಹೆಚ್ಚಿನ ಸಂಸ್ಕಾರಕ್ಕೆ ಒಳಪಡಿಸುವದಕ್ಕೆ ಅನುಕೂಲವಾದೀತು. ಶ್ರೀಬಗಳಾಂಬೆಯ ಭಕ್ತರು ಇದಕ್ಕೆ ನೆರವಾಗಬೇಕೆಂದು ಪ್ರಾರ್ಥಿಸುತ್ತೇವೆ.

ಅಧ್ಯಾತ್ಮಪ್ರಕಾಶಕಾರ್ಯಾಲಯ,<br>ವಿಕಾರಿಸಂವತ್ಸರದ ಭಾದ್ರಪದ ಶುದ್ಧ ೧ } ಪ್ರಕಾಶಕರು

ಶ್ರೀಚಿದಾನಂದಬಗಳಾಬ್ರಹ್ಮಾಸ್ತ್ರಾಯ ನಮಃ

# ಚಿದಾನಂದರಗಳೆ

ಚಿದಾನಂದಾ, ಸದ್ಗುರು ನಿತ್ಯಾತ್ಮ-ಸದಮಲಪರಿಪೂರ್ಣಹ[1] ಪರಮಾತ್ಮಾ ।
ಪರಮಾತ್ಮನೆ ಸಾಕ್ಷಾತ್ತನೆಯೆನಿಪ[2]-ಶಿರಿಶಿದ್ಧಾಗಿರಿ ಬಗಳಾಂಬೆನಿಪ[3] ।
ಬಗಳಾಂಬೆನಿಪವತಾರನೆಯೆಂಬ-ಸುಗಮ ಚಿದಾನಂದವಧೂತೆಂಬ[4] ।
ಎಂಬಾತನು ತಾನೇ ತಾನಿರುತ-ಸಂಭ್ರಮದಲಿ ಕಣ್ದೆರದೆಚ್ಚರುತ ।
ಎಚ್ಚರುತಾಲಿ[5] ಹರುಷಾದಿಂದ-ಬಿಚ್ಚಿದ ಚಿದನಂದರಗಳೆಯೆನೊಂದ ।
ಒಂದನು ಪೇಳಿದ ಅಪರೂಪಾದ-ಅಂದದ ವೇದಗಳಿಗೆ ನಿಲುಕಾದ[6] ।
ನಿಲುಕದ ತತ್ತ್ವವ ಪೇಳಿದ ತಾನು-ಜನುಮಮರಣಕೆ ಕಿಚ್ಚಿನಿಪುದನು ।
ಎನಿಪುದ ಪೇಳಿದ ಲೋಕಕ್ಕಾಗಿ-ಜನಗಳೆಲ್ಲ ಕಡೆಹಾವುದಕಾಗಿ ।
ಕಡೆಹಾವುದಕಾಗಿ ಪೇಳಿದ ನಿಮಗೆ-ಇಡಬ್ಯಾಡಿ ಚಿತ್ತವ ಕಂಡಾ ಕಡೆಗೆ ।
ಕಂಡಾ ಕಡೆಗೆ ಮನವ್ಹೋಡ್ಯಾಡೆ-ಖಂಡಿತ ಮಾತಿದು ನೀವು ಹಾಳ್ಹೋಡೆ ।
ಹಾಳ್ಹೋಡೆಗೆ ತತ್ತ್ವವ ಹೇಳ್ದಂತಿಹುದು-ಕೇಳ್ದಡೆ ಹೋಗ್ವದು[7] [ಭವಮಾಲೆ ಕಳೆದು ।
ಭವಮಾಲೆ ಕಳೆಯಲಿಕಿದೆ ಔಷಧವು-ವಿವರಿಸೆ ಸತಿಸುತಧನಕಾಮ್ಯಹವು[8]
ಕಾಮ್ಯಹವೂ ಮನಸಂಕಲ್ಪಂತು-ಸಮ್ಮತವಾಹವು ಸರ್ವಾವಂತು[9] ।
ಸರ್ವಾವಂತೂ ಆಗುವದಲ್ಲ-ಗರ್ವವ ಬಿಟ್ಟು ಕೇಳುವದೆಲ್ಲ ।
ಎಲ್ಲಾ ಜನಗಳು ಕೇಳ್ವದು[10] ತತ್ತ್ವ-ಸುಳ್ಳಲ್ಲವು ತಾನಿದು ಪರತತ್ತ್ವ ।
ತತ್ತ್ವವ ಕೇಳ್ದಡೆ ತೊತ್ತಿನಂತಿಹದು-ಮತ್ತೇ ದುರ್ಗುಣಕಿದು [ನಿಲುಕಾದು ।

1. ಪರಿಪೂರ್ಣ+ಅಹ.
2. ಸಾಕ್ಷಾತ್ತೇ; ಸಾಕ್ಷಾತ್ಪರಮಾತ್ಮನೇ.
2. ಬಗಳಾಂಬ+ಎನಿಪ.
4. ಅವಧೂತ+ಎಂಬ.
5. ಎಚ್ಚರುತಲಿ.
6. ನಿಲುಕದ.
7. ಹೋಗುವದು.
8. ಕಾಮ್ಯ+ಅಹವು.
9. ಸರ್ವವೂ+ಅಂತು.
10. [illegible]

೨

ನಿಲುಕಿದ ತತ್ತ್ವವ ಕೇಳಬೇಕೆಂದು-ಘಳಿಲನೆ ಶಿಷ್ಯನು ಗುರುವಿಂಗಂದು।
ಅಂಪೂ ಸಾಷ್ಟಾಂಗವ ಮಾಡುತಲಿ-ನಿಂದೂ ಬಹುಬಗೆ ಬಿನ್ನೈಸುತಲಿ ।
ಬಿನ್ನೈಸುತಲೀ ಎಲೆ ಸದ್ಗುರುವೆ-ನಿನ್ನಯ ಮರೆಹೊಕ್ಕೆ ಕಲ್ಪಾತರುವೆ।
ಕಲ್ಪಾತರುವಿಗೆ ತರುವೆಂದೆನಿಪ[1]-ಕಲ್ಪಾಣಿಗೆ (?) ದೊರಕದ ಅಪರೂಪ।
ಅಪರೂಪಾಗಿಹ ಆತ್ಮನೆ ನಿನ್ನ-ಗುಪಿತಬ್ರಹ್ಮವ ತೋರ್ವದು ಮುನ್ನ ।
ಮುನ್ನಾ ಎನ್ನವನೂ ನೀನೆಂದು-ಚನ್ನಾಗಿ ಪಾಣಿಡು[2] ತಲೆಮೇಲೆಂದು।
ತಲೆಮೇಲೆಂದೂ ದೈನ್ಯಂಬಡುತ-ಕಳೆವೆನು ಭವವನು ನಾನೆಂತೆನುತ ।
ಎಂತೆನುತಾಲಿ ಎಲೆ ಸದ್ಗುರುವೆ-ಅಂತರವಿಡದಲೆ[3] ಮಾಡಿಕೊ[4] ಪರವೆ।
ಪರವೇ ನಾ ದಾರೆಂಬುದ[5] ಪೇಳು-ಅರಿವನು ಮುಚ್ಚುವ
ಮರವೆಯ ಸೀಳು ।
ಮರವೆಯ ಸೀಳೆಂಬ ಶಿಷ್ಯನ ನೋಡಿ-ಕರುಣಿಗಳರಸನು ತಲೆತೂಗ್ಯಾಡಿ[6]
ತೂಗ್ಯಾಡೀ ಆನಂದಾದಿಂದ-ಅಗಳುಕದಿರೆಂದನು[7] ಮುದದಿಂದ ।
ಮುದದಿಂದಾ ನುಡಿದನು ಶಿಷ್ಯಾಗೆ-ವಿಧವಿಧವೃತ್ತಿಗಳೆಲ್ಲವು ಕರಗೆ ।
ಕರಗೆ ಸರ್ವಾ ಸಂಕಲ್ಪೆಲ್ಲ-ಪರಮಾತ್ಮನು ಪೇಳಿದ ತಾನೆಲ್ಲ ।

ಎಲ್ಲಾ ತತ್ತ್ವವ ಹೇಳಿದು ಕೊನೆಗೆ-ನಿಲ್ಲದು ವೈರಾಗ್ಯಿಲ್ಲದೆ ನಿನಗೆ ।
ನಿನಗೆ ಹೇಳುವೆ ಪರತತ್ತ್ವವನು-ಮನದಲಿ ನಿಶ್ಚಯಮಾಡಿದ ನೀನು।
ನೀನೂ ಬಿಡುಬಿಡು ಮಾತಾಪಿತರ-ನೀನೂ ಬಿಡುಬಿಡು ಸತಿಸುತರೆಂಬರ।
ಸತಿಸುತರೆಂಬರು ಕಾಲನ ಚರರು-ಹಿತವಾಗಿಹರು ಗುಪಿತದಿ ಅವರು ।
ಅವರನು ನಂಬಲು ಜನನಾಮರಣಾ-ವಿವರಿಸೆ ಬಹುಜನ್ಮವ ತಿರುಗುವಣ।
ತಿರುಗುವಣಲ್ಲದೆ ಸತಿ ತಾ ದಾರು-ತಿರುಗುವಣಲ್ಲದೆ ಸುತ ತಾ ದಾರು।
ದಾರೂ ಎಂಬುದ ಅರಿಯದನಾಗಿ-ಬರಿದೇ ತಿರುಗುವೆ ನೀ ಹುಚ್ಚಾಗಿ।
ಹುಚ್ಚಾಗಿ ಗೋಡೆಯ ಕೆರೆದಂತೆ-ನುಚ್ಚಿಡು[8] ಮಾಡುವೆ ಮನೆಯಾ ಚಿಂತೆ।

1. ಕಲ್ಪವೃಕ್ಷಕ್ಕೂ ಕಲ್ಪವೃಕ್ಷವೆನಿಸಿರುವ, ಅದಕ್ಕೂ ಬೇಕಾದದ್ದನ್ನು ಕೊಡಬಲ್ಲ.
2. ಪಾಣಿ+ಇಡು; ಕೈಯನ್ನಿಡು.  3. ಅಂತರ+ಇಡದಲೆ; ದೂರವಾಗಿಡದೆ.
4. ನಿನ್ನವನನ್ನಾಗಿ ಮಾಡಿಕೊ.  5. ಯಾರು ಎನ್ನುವದನ್ನು.
6. ತಲೆಯನು ತೂಗಿ.  7. ಅಳುಕದಿರು+ಎಂದನು : ಹೆದರಬೇಡ ಎಂದನು

ಚಿಂತೆಯಲಿಂದಲಿ[1] ಮಕ್ಕಳಿಗಳುವೆ- ಚಿಂತೆಯಲಿಂದಲಿ
ಸತಿಗೆಯು ಕೊಳೆವೆ[2] ।
ಕೊಳೆವೆಯು ನಾನಾರೋಗಗಳಿಂದ-ಬಳಲುವೆ ಬಡತನಬೇಗೆಗಳಿಂದ ।
ಬೇಗೆಗಳಿಂದಲಿ ಸುಟ್ಟೊಸುಟ್ಟೊ-ಮೂಗನು ಮಾರಿ (?) ನೀ ಗತಿಗೆಟ್ಟೊ ।
ಗತಿಗೆಟ್ಟೊ ನೀ ಸಂಸಾರದಿ ಸಿಕ್ಕಿ-ಹಿತವರ ಕಾಣದೆ ದೈನ್ಯದಿ ಸುಕ್ಕಿ ।
ಸುಕ್ಕಿದೆ ನಾನಾಭ್ರಾಂತಿಯು ಹತ್ತಿ-ಮುಕ್ಕರಿಕೆಯ[3] ಬಲು
[ಸಂಶಯ ಸುತ್ತಿ ।
ಸುತ್ತೀಸುತ್ತ್ಯಾಡುವೆ ಇಹಪರಕೆ-ಎತ್ತಲೆವಖಿಲಸತಿಸುತಗೃಹಕೆ[4] ।
ಗೃಹಕೆಯು ಅಳುವೆಯು ಗೃಹಗಳು ಎಷ್ಟು-ಗೃಹಿಣಿಗೆ ಅಳುವೆಯು
[ಗೃಹಿಣಿಗಳೆಷ್ಟು ।
ಎಷ್ಟೊ ಆದವು ದೇಹವು ಕುಲವು-ಎಷ್ಟೊ ಆದವು ಧೊರೆತನ ಹಲವು ।
ಹಲವೂ ಜನ್ಮವ ನೀ ತೊಳಲುತಲಿ-ಮಲಮೂತ್ರದ ಕುಣಿಯೊಳು[5]
ಬೆಳವುತಲಿ ।
ಬೆಳವುತಲೀ ದುಃಖಗಳೆಷ್ಟೆಷ್ಟು-ಕಳೆದವು ನಿನಗೆ ಬಾಲತ್ವೆಷ್ಟು ।
ಎಷ್ಟೊ ಯೌವನವೃದ್ಧಾಪ್ಯಗಳು-ಎಷ್ಟೊ ಕ್ರಿಮಿಪಶುತೃಣರೂಪಗಳು ।
ರೂಪಗಳು ಎಣಿಸಲು ಎಣಿಕಿಲ್ಲ[6]-ಕೋಪತಾಪಗಳು ಮಳಲಂತೆಲ್ಲ[7] ।
ಎಲ್ಲಾ ಹಿರಿಯರ ತಾ ನಿಂದಿಸುತ-ಬಲ್ಲವನು ನಾ ಶ್ರೇಷ್ಠನೆನಿಸುತ ।
ಶ್ರೇಷ್ಠನೆನಿಸುತಾ ನಷ್ಟರೊಳಗೆ-ಭ್ರಷ್ಟಾಗಿ ತಿರುಗುವೆ ಹಂಕರಕೆಳಗೆ[8] ।
ಹಂಕರಕೆಳಗೆ ನೀ ಪುಡಿಯಾಗಿ-ಬೆಂಕಿಯು ಆಗುವೆ ಪುಸಿನುಡಿಗಾಗಿ ।
ಪುಸಿನುಡಿಗಾಗಿ ನಂಬುವೆ ನೀನು-ಘಸಣಿಗೊಳ್ಳೆಯು[9] ನಿಜಮಾತಾನು ।
ನಿಜಮಾತಾಡುವರನೆ ನೀ ಕಂಡು-ಕುಜನವನಾಡುವೆ[10] ನೀ ಖತಿಗೊಂಡು
ಖತಿಗೊಂಡೂ ನೀ ಬಡಿದು ಆಡುವೆ[11]- ಮತಿಗೆಟ್ಟು ನೀ
[ಬಗುಳಿಯಾಡುವೆ ।

---

1. ಚಿಂತೆಯಲಿ+ಇಂದಲಿ ; ಚಿಂತೆಯಿಂದ.

2. ಕೊಳೆಯುತ್ತಿದ್ದೀಯೆ ; ಸಂಕಟಪಡುತ್ತಿದ್ದೀಯೆ.

3. ಸಂಕಟಪಟ್ಟು. 4. ಎತ್ತಲೆವೆ+ಅಖಿಲಸತಿಸುತಗೃಹಕೆ ; ಎಲ್ಲಾ ಬಗೆಯ ಹೆಂಡಿರುಮಕ್ಕಳುಮನೆಗಳಿಗೂ ಗೂಳಿಯಂತೆ ತಿರುಗುತ್ತಿರುವೆ. 5. ಗರ್ಭದಲ್ಲಿ.

6. ಎಣಿಕೆ+ಇಲ್ಲ ; ಲೆಕ್ಕವಿಲ್ಲ. 7. ಮಳಲಂತೆ+ಎಲ್ಲ, ಮಳಲ ಕಣಗಳಂತೆ. ಅನಂತವಾಗಿರುವವು, ಅಥವಾ ಮಳಲಂತೆ ಎಷ್ಟು ತೋಡಿದರೂ ಮತ್ತೆಮತ್ತೆ ಕಾಣಿಸಿಕೊಳ್ಳುತ್ತಲೇ ಇರುವವು. 8. ಅಹಂಕಾರದ ಕೆಳಗೆ ; ಅಹಂಕಾರಕ್ಕೆ ವಶನಾಗಿ.

9. ಹತ್ತಿರಕ್ಕೆ ಬರಗೊಡುವದಿಲ್ಲ.

ಆಡುವೆ ಸುಳ್ಳನು ಸಾಗರದಷ್ಟು-ಛಾಡವ[1] ಬಗುಳುವೆ ಸುರಗಿರಿಯುಷ್ಟು।
ಎಷ್ಟು ಗಳಿಸಲೂ ಸಂತುಷ್ಟಿಲ್ಲ-ಎಷ್ಟು ಎಷ್ಟು ಬಾಳಿದರೂ ತೃಪ್ತಿಲ್ಲ।
ತೃಪ್ತಿಲ್ಲವು ಸ್ತ್ರೀವಿಷಯಂಗಳಿಗೆ-ತೃಪ್ತಿಲ್ಲವು ಸುತಧನಪಶುಗಳಿಗೆ।
ಪಶುಗಳಿಗೇ ಘನಪಶು ನೀನಾಗಿ-ಮಸವಂಟ[2] (?) ನಾದೆಯು
[ಸಂಸಾರಕಾಗಿ।
ಸಂಸಾರಕಾಗಿ ಮರವೆಯು ನಿನ್ನ-ಧ್ವಂಸವ ಮಾಡುವೆ ಜ್ಞಾನವ ಮುನ್ನ।
ಮುನ್ನಾ ನಾದಾರೆಂಬುದನರಿಯೆ-ಇನ್ನೂ ಜನ್ಮಾವದೊ ಗುರುತರಿಯೆ।
ಗುರುತರಿಯೆ ಮೋಹಾಂಧವು ಸುತ್ತೆ-ತಿರುಳೆಯ
[ಹುಳುವೀನಂತೆಯು[3] ಮತ್ತೆ।
ಮತ್ತೇ ಮತ್ತೇ ನೀ ಗತಿಗೆಟ್ಟು-ಸತ್ತೂ ಹುಟ್ಟುವೆ ಬಾಳುವೆಗೆಟ್ಟು।
ಬಾಳುವೆಗೆಟ್ಟೂ ತನು ನಾನೆಂಬೆ-ಭಾಳ್ಸಂತೋಷದಿ[4] ತನು ನೋಡಿಕೊಂಬೆ
ನೋಡಿಕೊಂಬೆ ನಾ ಚೆಲುವಿಹೆನೆಂದು-ಆಡಿಕೊಂಬೆ ನಾ
[ಶಾಣೆಯನೆಂದು[5]।
ಶಾಣೆಯನೆಂದು ನಿನಗೆ ನೆಚ್ಚುವೆ-ಜಾಣನು ನಾನೆಂದು ನಿನಗೆ ಮೆಚ್ಚುವೆ
ಮೆಚ್ಚುವೆ ಹೆಂಡಿರುಮಕ್ಕಳ ನೀನು-ಮೆಚ್ಚುವೆ ದೇಹದ ಸಂಪತ್ತಾನು।
ಸಂಪತ್ತಾನು ಸ್ಥಿರವೆಂದರಿವೆ-ಸೊಂಪೆಂದು ಗತಿಮತಿಯೆಲ್ಲವ ಮರೆವೆ।
ಮರೆವೆಯು ಗುರುಹಿರಿಯರೆಲ್ಲರನು-ಮರೆವೆಯು ನಿನ್ನಯ
[ಗತಿಯಿರವಾನು।
ಗತಿಯಿರವಾನು ಕೆಡಿಸಿತು ಮನವು-ಹಿತವಾಗಿ ತೋರಿತು
[ನಿನಗೆಯು ತನುವು।
ತನುವೂ ಮಲಮೂತ್ರವು ರಕ್ತಾಸ್ಥಿ-ಇನಿತೀ ಕ್ರಿಮಿಕೀವು ನಾನಾವಸ್ಥಿ[6]।
ನಾನಾವಸ್ಥೆಯಲಿಂದಲಿ ಕಾಯ-ಏನೇನು ಹುರುಳಿಲ್ಲ ಅಜ್ಞಾನಮಾಯಾ
ಅಜ್ಞಾನಮಾಯಕೆ ಮೋಹಬಡುವರೆ-ಸುಜ್ಞಾನೆಂಬುದ
[ಸುಟ್ಟುಬಿಡುವರೆ।

೪

ಬಿಡುವರೆ ಸದ್ಗುರುಮಾರ್ಗವ ನೀನು-ಕೆಡದಂಥಾ[7] ಬೋಧೆಯ
[ಬೋಧಿಪೆನು।
ಬೋಧಿಪೆನು ನೀ ನಿನ್ನನೆ ಅರಿಯು-ಕ್ರೋಧವು ಸಂಕಲ್ಪಿಲ್ಲವ ಮರೆಯು

---

1. ಚಾಡಿಯನ್ನು. 2. ಬಲಿ ?
3. ರೇಷ್ಮೆಯ ಹುಳುವಿನ ಹಾಗೆ 4. ಬಹಳ ಸಂತೋಷದಿಂದ.
5. ಜಾಣನೆಂದು. 6. ನಾನಾ ಅವಸ್ಥೆ.

ಮರೆಯುತ್ತೆನ್ನು ಭ್ರಾಂತಿ ಮನಭ್ರಾಂತಿ-ಅರಿದೇ[1] ಹಿಡಿ ನೀ ಶಮದಮ ।
ಶಾಂತಿಯು ಹಿಡಿದರೆ ಬೋಧೆ ನಿಲುವದು-ಸಂತೋಷವಾಗಿಯೆ ಸುಖ [ತೋರುವದು ।
ತೋರುವದು ನೀನೆಂಬುದು ನಿನಗೆ-ಬೇರಿಲ್ಲವು ನಿನ್ನ ಬಿಟ್ಟರೆ ಹೊರಗೆ ।
ಹೊರಗೆಂಬುದ ನೀ ಮರೆ ಪರಮಾತ್ಮ-ಸ್ಥಿರವಾತಿದು ನಂಬುದು[2] [ಶುದ್ಧಾತ್ಮ ।
ಶುದ್ಧಾತ್ಮಗೆ ನಿನಗೇನೇನಿಲ್ಲ-ಶುದ್ಧವಸ್ತುಗೆ ತನು ಮೊದಲಿಲ್ಲ ।
ಇಲ್ಲಾ ಏನೇನಿಲ್ಲದೆ ನಿನಗೆ-ಇಲ್ಲದೆ ತೋರಿತು ನಿನ್ನಲಿ ನಿನಗೆ ।
ನಿನಗೆ ತೋರಿತು ಜಗ ಖರೆಯಂತೆ-ನಿನಗೆ ತೋರಿತು ತನು ಮನೆಯಂತೆ ।
ಮನೆಯಂತೇ ಮಕ್ಕಳ ರೂಪದಲಿ-ಧನವಂತೆಯು ನಾನಾರೂಪದಲಿ ।
ನಾನಾರೂಪಿಲಿ ತೋರಿತು ಮಾಯೆ-ಏನೆಂಬೆನು ರಜ್ಜುಸರ್ಪನ್ಯಾಯ[3] ।
ನ್ಯಾಯಾನ್ಯಾಯವು ಇಲ್ಲದ ಸ್ಥಳದಿ-ಮಾಯೆವು ಹೊಳೆದುದು ನಿನ್ನಯ [ಕಳದಿ[4] ।
ನಿನ್ನಯ ಕಳದಿ ತೋರ್ಯಡುಗುತಲಿ-ತನ್ನಲಿ ತಾನೇ ಬಯಲಾಗುತಲಿ ।
ಆಗುತಲೀ ಭೂತಗಳೆಂಬೈದು-ಸಾಗಿದವೈದಕೆ ಇಪ್ಪತ್ತೈದು ।
ಇಪ್ಪತ್ತೈದು[5] ತತ್ತ್ವಗಳಾಗಿ-ಅಪ್ಪಿದವನಂತಗುಣಗಳು[6] ಬೇಗೆ ।
ಗುಣಗಳ ಬೇಗೆಯಿಂದಲಿ ಜಗವು-ಎಣಿಕಿಲ್ಲದೆ ತೋರಿದು[7] [ಲಯಿಸುವವು ।
ಲಯಿಸುವವು ಬುದ್ಬುದಗಳ ತೆರದಿ-ಬಯಕೆ ತೋರ್ಪುದು [ಥರದಿ ಥರದಿ ।
ಥರದಿ ನಿನ್ನಯ ಗುಣಗಳಿಂದ-ಶರೀರ ನಿನಗಾದವು ಮೂರಂದ ।
ಅಂದಾಯಿತು ಸ್ಥೂಲವು ಸೂಕ್ಷ್ಮವು-ಮುಂದಾಯಿತು ಎರಡಕೆ [ಕಾರಣವು[8] ।
ಕಾರಣವು ಇರೆ ಮಹಾಕಾರಣವು[9]-ತೋರಿತು ನಾಲ್ಕದು ಸೋಽಹಂ [ತನುವು ।

---

1. ಭ್ರಾಂತಿಯನ್ನು ಕತ್ತರಿಸಿಯೋ. 2. ನಂಬುವದು.
3. ಹಗ್ಗದಲ್ಲಿ ಹಾವು ತೋರುವಂತೆ.
4. ಬಯಲಿನಲ್ಲಿ; 'ತಳದಿ' ಎಂಬ ಪಾಠವಿದ್ದರೆ ಸ್ಥಳದಲ್ಲಿ ಎಂದರ್ಥ.
5. ಸಾಂಖ್ಯರು ಹೇಳುವ ಇಪ್ಪತ್ತೈದು ತತ್ತ್ವಗಳು.
6. ಗುಣಗಳು– ಸತ್ತ್ವರಜಸ್ತಮೋಗುಣಗಳು, ಅವುಗಳ ಕಾರ್ಯಗಳು.

ತನುವು ಸ್ಥೂಲವು ತೋರ್‍ಯಡಗುವದು-ತನು ಸೂಕ್ಷ್ಮವು ಜನ್ಮವ [ತಿರುಗುವದು ।
ತಿರುಗುವದು ವಾಸನಬಲದಿಂದ-ಸೊರಗುವದು ಸುಖದುಃಖಗಳಿಂದ ।
ದುಃಖಗಳಿಂದಲಿ ಹಸು[1] ತೃಷೆಸಹಿತ-ಸುಕ್ಕಿ ಶೋಕಮೋಹದಿ ಬಳಲುತ್ತ
ಬಳಲುತ್ತಾ ಇಹಪರ ನರಕಾವ-ತೊಳಲುತ್ತ ಜನ್ಮಜನ್ಮಾಂತರವ ।
ಜನ್ಮಾಂತರವ ತಾ ತೊಳಲುತ್ತ-ನನ್ನಾಸತಿಯು ನನ್ನ ಮನೆಯೆನುತ ।
ಎನ್ನುತ್ತ ಬಹುಸ್ಥೂಲಗಳಾನು-ಮನೆಗಳ ಬಿಟ್ಟಂತೆ ಬಿಡುತಲಿ ತಾನು ।
ತಾನು ಹೋಗುವದು ಮತ್ತೊಂದು ಸ್ಥೂಲ-ಏನೇನು ಹೇಳಲಿ ಈ ಪರಿ ಭ್ರಾಳ ।[2]
ಭ್ರಾಳಾಯಿತು ಸ್ಥೂಲವು ಸೂಕ್ಷ್ಮಕ್ಕೆ-ಹೇಳಲಿಕಿಲ್ಲವು ನಿನಗೀ ಧಕ್ಕೆ ।
ಧಕ್ಕೆಯು ಸೂಕ್ಷ್ಮಕೆ, ನೀ ನಿರ್ವಯಲು- ಸಿಕ್ಕಿದ ತೆರನಂತೆ ಘಟದೊಳು [ಬಯಲು ।
ಬಯಲಿಗೆ ಏನೂ ಸಂಗವದಿಲ್ಲ-ಬಯಲದು, ಲಿಂಗಾದೇಹಕೆ ಎಲ್ಲ ।
ಎಲ್ಲರಿ ಸೂಕ್ಷ್ಮವೆ ಜೀವೆನಿಸುವದು-ಇಲ್ಲವು ನಿನಗೆಯು ಜೀವತ್ವವದು ।
ಜೀವತ್ವೆನಿಪುದು ಮುಚ್ಚಿರೆ ಲಿಂಗ[3]-ಜೀವನೆ ಇಲ್ಲವು[4] ಲಿಂಗಾಭಂಗ ।
ಲಿಂಗಾ ಭಂಗಾಗಲು ಶುದ್ಧಾತ್ಮ-ಲಿಂಗವು ಮುಚ್ಚಲು ನೀ ಜೀವಾತ್ಮ ।
ಜೀವಾತ್ಮೆಂಬುದು ಆರೋಪಣವು[5]-ಜೀವನ ಗುಣಗಳು ನಿನಗಿಲ್ಲಾವು ।
ಇಲ್ಲವು ನಿನಗೆಯು ಜೀವೇಶಾದ್ಯ[6]- ಇಲ್ಲವು ನಿನಗೆಯು ವಿದ್ಯಾವಿದ್ಯ ।
ವಿದ್ಯದಲಾದ ಈಶ್ವರ ನೀನು-ಅವಿದ್ಯದಲಾದ ಜೀವನು ನೀನು ।
ನೀನೂ ಆಗಿಹೆ ಜಗದೀಶ್ವರ-ತಾನಜನಾಗಿ ಮಾಡ್ವೆ ಸೃಷ್ಟ್ಯಾಕಾರ ।
ಆಕಾರವ ಹರಿ ರಕ್ಷಿಪ ತಾನು-ಲೋಕವೆಲ್ಲ ಲಯಮಾಡುವ ಹರನು ।
ಹರನು ಹರಿ ಬ್ರಹ್ಮಾದಿಯು ಎಲ್ಲ-ಇರುವನು ಈಶ್ವರ ನಾನೊಬ್ಬೆಲ್ಲ ।
ಎಲ್ಲಾ ಆಹಾ[7] ಪರಮನು ನೀನು-ಸೊಲ್ಲಿಸಲಿಕೆ ನೀ ನಿಜತೃಪ್ತಾನು ।
ತೃಪ್ತನು ನಿನ್ನ ಮಾಯೆಯಲಿಂದ-ಸತ್ತು ಹುಟ್ಟುವೆ ನಾನಾಛಂದ ।
ನಾನಾಛಂದದಿ ಹುಟ್ಟುವ ನೀನು-ನಾನಾಛಂದದಿ ಸಾವವ ನೀನು ।
ನೀನು ಬಂಧುಗಳೆಲ್ಲಾಗಿಹನು-ನೀನು ಬಳಗಗಳೆಲ್ಲಾಗಿಹನು ।
ಎಲ್ಲಾಗಿಹನು ತಂದೆಯು ತಾಯಿ-ಎಲ್ಲಾಗಿಹನು ಸತಿಸುತಮಾಯಿ ।
ಮಾಯಿ ಸಂಗದಿ ನಿನಗೀ ಭಂಗ-ಮಾಯದ ತೋರಿಕೆ ನೀ ನಿಸ್ಸಂಗ ।

1. ಹಸಿವು. 2. ಬಹಳ. 3. ಲಿಂಗಶರೀರವು ಮುಚ್ಚಿಕೊಂಡಿದ್ದರೇ ಜೀವತ್ವವು.

ನಿಸ್ಸಂಗ ನೀನಿರೆ ಸಿಕ್ಕುವೆಯೊ-ದುಸ್ಸಂಗದಿಂದಲಿ ಬಳಲುವೆಯೊ ।
ಬಳಲುವೆಯೊ ಲಿಂಗದಿ ಎರಡಹೆಯೊ-ಅಳಿಯಲು ಲಿಂಗವು ನೀನೊಬ್ಬಿ
ಹೆಯೊ ।
ಇಹೆಯೊ ಉದಕದಿ ಚಂದ್ರಿದ್ದಂತೆ-ಇಹೆಯಾದರ್ಶಕೆ ಮುಖವಿದ್ದಂತೆ ।
ಇದ್ದಂತೆ ವಿದ್ಯಾವಿದ್ಯದಲಿ-ಇದ್ದಿಹೆ ಜೀವೇಶ್ವರರೆನಿಸುತಲಿ ।
ಎನಿಸುತಲಿಬ್ಬರ ಸುಖದುಃಖಾವ[1]-ಇನಿತೂ ಹೊಂದದೊಲಿಹ
ಮಹದೇವ ।
ಮಹದೇವಾ ನೀನೊಬ್ಬನೆ ಸತ್ಯ-ಇಹೆ ತೋರಿಕೆ ತಾನೆಲ್ಲವು ಮಿಥ್ಯಾ ।
ಮಿಥ್ಯವು ಇಂದ್ರಜಾಲದಂತೆ-ಮಿಥ್ಯದ ಹೊಳಪಿದು ನಭಛಾಯದಂತೆ[2] ।
ನಭಛಾಯದಂತೆ ವೈಕುಂಠಗಳು-ನಭಛಾಯದಂತೆ ಸತ್ಯಲೋಕಗಳು ।
ಸತ್ಯಲೋಕಗಳು ದೃಶ್ಯಗಳಾಗೆ-ಸತ್ಯವು ನರಕವು ಸ್ವರ್ಗವು ಹೇಗೆ ? ।
ಹೇಗೆಯು ಹೇಳೀ ತೋರ್ಪುದು ಎಲ್ಲ-ಹೇಗೆ ಹೇಳು ಲೋಕಸಂಸಾರೆಲ್ಲ ।
ಎಲ್ಲವು ಪುಸಿ ನೀನೊಬ್ಬನೆ ಸತ್ಯ-ಸುಳ್ಳಲ್ಲವು ತೋರುವದಿದು ಮಿಥ್ಯ ।
ಮಿಥ್ಯವು ತ್ರೈಮೂರ್ತ್ಯಂಬಾ ದೊರೆಯು[3]-ಸತ್ಯವು ಬ್ರಹ್ಮವು
[ನಾನೆಂದರಿಯು ।
ಅರಿಯೂ ಮನಕೆಯು ಬೇರಿಹೆನೆಂದು-ಅರಿಯಿಂದ್ರಿಯಗಳ್ಗೆ ದೂರಿಹೆ
ನೆಂದು ।
ದೂರಿಹೆನೆಂದು ನಿನ್ನನೆ ಕಾಣು-ಪರಮಾಣಿನೊಳಗೆ ನೀ ಪರಮಾಣು[4] ।
ಪರಮಾಣು ನೀನಾಗಿಹೆ ವಸ್ತು[5] ಚರಿಪವು ನಿನ್ನಲಿ ತ್ರಿತಯಾವಸ್ಥಾ[6] ।
ಅವಸ್ಥಾಗಳಿಗೆಯು ನೀ ಸಾಕ್ಷಿ-ಆವುದ[7] ಕಾಣುವ ನೀ ಜಗದಕ್ಷಿ ।
ಅಕ್ಷಿಗೆ ಅಕ್ಷಿಯು[8] ನಿನ್ನನೆ ತಿಳಿಯು-ಲಕ್ಷಿಸಿ ನರ ನಾನೆಂಬುದ[9] ಕಳೆಯು ।
ಕಳೆಯು ನಿನ್ನಯ ಜಗದಷ್ಟಂದ-ಹೊಳೆದು ತೋರ್ಪದು ಮೃಗಜಲ
ದಂದ[10] ।
ಮೃಗಜಲದಂದವ ಖರೆಯವೆಂಬರೆ[11]-ಜಗವಿದ ತಾನಿದ ನಿತ್ಯವೆಂಬರೆ ।

1. ಈಶ್ವರನ ಸುಖವನ್ನಾಗಲಿ ಜೀವನ ದುಃಖವನ್ನಾಗಲಿ.
2. ಆಕಾಶದಲ್ಲಿ ತೋರುವ ನೀಲಿಬಣ್ಣದಂತೆ.
3. ಬ್ರಹ್ಮವಿಷ್ಣುರುದ್ರಾತ್ಮಕನಾದ ಈಶ್ವರನು. 4. ಸೂಕ್ಷ್ಮಕ್ಕಿಂತಲೂ ಸೂಕ್ಷ್ಮನು.
5. ವಸ್ತು. 6. ಎಚ್ಚರ, ಕನಸು, ನಿದ್ರೆ-ಎಂಬ ಮೂರು ಅವಸ್ಥೆಗಳು.
7. ಯಾವದನ್ನಾದರೂ, ಎಲ್ಲವನ್ನೂ.
8. ಕಣ್ಣಿಗೆ ಕಣ್ಣು, ಇಂದ್ರಿಯಗಳಿಗೆಲ್ಲ ಅರಿವನ್ನು ಕೊಡುವ ಚೈತನ್ಯವು.

ನಿತ್ಯವೆಂಬರೆ, ನಿತ್ಯಾ ಖರೆಯು-ಸತ್ಯವು[1] ನೀನೇ ಎಲೆ ಗುರುವರಿಯು[2] ।
ಗುರುವರಿಯಾನೇ ನೀನೆಯೆಂದುಕೊ-ಹರಿಹರವಿಧಿಯು ತಾನೆ
ಯೆಂದುಕೊ ।

ಎಂದುಕೊ ಬ್ರಹ್ಮವು ನಾ ಸಾಕ್ಷೆಂದು-ಎಂದುಕೊ ನಾನೇ
[ಪರಿಪೂರ್ಣೆಂದು ।

ಪರಿಪೂರ್ಣೆಂದು ಸಹಜನಾಗಿರು[3]-ಪರಮಾತ್ಮೆಂದೂ ನೀನೆಯಾಗಿರು ।
ನೀನೆಯಾಗಿರು ನಿನ್ನೊಳು ನೀನು-ನೀನೆ ದೃಷ್ಟಿಸಿ ನಿನ್ನನೆ ಕಾಣು ।
ಕಾಣು ತೋರುವ ನಾನಾ ಕಳೆಯು-ಸೋನೆಯು ಸುರಿವಾ ಶುಕ್ರರ (?)
[ಮಳೆಯು ।

ಮಳೆಯು ರಶ್ಮಿಯು ನಾನಾವೊತ್ತ-ಥಳಥಳಥಳನೆಂದೆನೆ ಎತ್ತೆತ್ತ ।
ಎತ್ತೆತ್ತ ಪ್ರಭೆಗಳು-ಬೆಳಗಿರಲು-ಸುತ್ತಲು ನಾನಾ ದೃಶ್ಯ ತೋರಿರಲು ।
ತೋರಿರಲು ದೃಶ್ಯಗಳಿಗೆ ಬೇರಾಗಿ-ಭೋರೆನಿಪಾ ನಾದವು ಇಂಪಾಗಿ ।
ಇಂಪಾಗಿ ಕೇಳುತ ಪ್ರಣವವ ನೀನು- ಸೊಂಪಿಲಿ ನಿನ್ನಯ ಸ್ವರೂಪ
[ಕಾಣು ।

ಕಾಣು ಝುಳಝುಳಝುಳಮಯವಾದ-ಕಾಣು ವೇದಗಳಿಗೇ ನಿಲುಕಾದ।
ನಿಲುಕದ ತೇಜಃಪುಂಜ ಬ್ರಹ್ಮವ-ತೊಳತೊಳಗಿಯೆ ತಾನೆ ಬೆಳಗುವ ।
ತಾನೇ ಬೆಳಗುವ ಬ್ರಹ್ಮನೆಯಾಗಿ-ಏನೇನರುಹು ಕುರುಹು[4] ಹೋಗಿ।
ಹೋಗಿಯೆ ಬಾಹ್ಯಾಂತರದಾಚಾರ-ಆಗಿಯೆ ನಿರಾಳ[5] ನಿರ್ವಿಕಾರ ।
ನಿರ್ವಿಕಾರವಾಗಿ ಮಧುವನು-ಸವಿದಂತೆ ಮೂಕನ ಸ್ಥಿತಿಯಾನು ।
ಸ್ಥಿತಿಯನೆ ತಾಳಿಯೆ ಬ್ರಹ್ಮದಿ ಬೆರೆದು- ಅತಿತುರ್ಯಾತೀತನಾಗಿಯೆ[6]
[ಮೆರೆದು ।

ಮೆರೆದು ನಿನ್ನೊಳ- ನೀನೇಯಾಗಿ- ಅರಿತು ಕಣ್ದೆರೆ[7] ನೀ ವಸ್ತಾಗಿ[8] ।
ವಸ್ತಾಗಿ ನೀ ಕಾಣು ಜಗವ- ವಸ್ತಾಗಿ ಅರಿ ನಾನಾರೂಪವ ।
ನಾನಾರೂಪವ ನೀನೆಂದು ನೋಡು-ನಾನಾರೂಪವ ತಾನೆಂದು ಪಾಡು ।
ಪಾಡು ನಿನಗೆಯು ಆಚಾರಿಲ್ಲ-ನೋಡಲು ಕ್ರಿಯವು ಕುಲ ಮೊದಲಿಲ್ಲ।
ಇಲ್ಲಾ ದೇವತೆ ಮಂತ್ರಾಸನವು-ಇಲ್ಲವು ಶಕುನವು ಅವಶಕುನಾವು ।

---

1. ನಿಜವಾಗಿಯೂ ಸತ್ಯವಾಗಿರುವ, ಪರಮಾರ್ಥಸತ್ಯ.
2. ಗುರುವರ್ಯ, ಗುರುಶ್ರೇಷ್ಠ.
3. ನಿನ್ನ ನಿಜವಾದ ಸ್ಥಿತಿಯಲ್ಲಿರು.
4. ಯಾವ ವಿಧವಾದ ಅರಿವಾಗಲಿ ಗುರುತಾಗಲಿ ಇಲ್ಲದೆ.
5. [illegible] ಸಂಬಂಧವಿಲ್ಲದ, ಸ್ವಚ್ಛವಾದ.

ಅವಶಕೆಸಾವು ಆರಿಗೆ ಅಹುದು-ವಿವರಿಸಿಯಿದ್ದರೆ ಇನ್ನೊಂದಾದು[1] ।
ಇನ್ನೊಂದಾದು ಅದು ನೀನಾತ್ಮ-ಉನ್ನತ ಅಖಂಡ ಅವ್ಯಕ್ತಾತ್ಮ ।
ಆತ್ಮನೆ ಕೇಳ್ಳೀ ನುಡಿದುದೆ ಮಂತ್ರ-ಸ್ವಾತ್ಮನೆ ನೀನೇ ಸರ್ವಸ್ವತಂತ್ರ ।
ಸ್ವಾತಂತ್ರ್ಯ ನಿ ಉಂಡದೆ ನೈವೇದ್ಯ-ಸ್ವಾಂತಃಸುಖವದು ತಾನೆ ಅಭೇದ್ಯ ।
ಅಭೇದ್ಯಾನೇ ನೀನೆ ದೇವರು-ಸೌಭಾಗ್ಯಾರು ಇನ್ನುಂಟೆ ಹೆರರು[2] ।
ಹೆರರೆಂಬರಿವಿಗೆ ಹೆರನೆಂದೆನುತ[3]-ಗುರುರಾಯನು ಶಿಷ್ಯಗೆ ಬೋಧಿಸುತ ।
ಬೋಧಿಸುತಿರುತಿರೆ ಶಿಷ್ಯನು ಎದ್ದು-ನೋದಿಯ(?)ಹರುಷದಿ [ಚರಣಕೆ ಬಿದ್ದು ।
ಬಿದ್ದು ಸ್ತೋತ್ರವ ಮಾಡಿದ ಗುರುವ-ಶುದ್ಧತತ್ತ್ವಕೇ ಪರಕೇ ಪರವ ।

೫

ಪರಾಮಾದವನೇ ಪರಿಪೂರ್ಣನೆ-ಕರುಣಾಕರನೆ ಮುಕ್ತಿಗೆ ವರನೆ ।
ಮುಕ್ತಿಗೆ ವರನೇ ಎಂತೆಂದು ಹೊಗಳೆ-ಭಕ್ತನ ಸದ್ಗುರು ತಾನೀಗ [ಮುಗುಳೆ[4] ।
ಮುಗುಳೇ ಕರವಿಟ್ಟನು ಶಿರದಲಿ-ಮಗನೇ ಬ್ರಹ್ಮಗು ನೀನೆನುತಾಲಿ ।
ಎನುತಾಲಿರಲು ಪರವಶನಾದ-ಘನ ಪೂರ್ಣಾತ್ಮನು ತಾನೇಯಾದ ।
ತಾನೇ ಅವ ಶಿಷ್ಯನ ನೋಡಿ-ಆನಂದವಾದನು ಗುರು ನಲಿದಾಡಿ ।
ನಲಿದಾಡಿ ಮಾಡಿದನು ಸಂಜ್ಞೆ-ಬಲಿಸಿಯೆ ಬ್ರಹ್ಮವ ಇತ್ತನು ಅಜ್ಞೆ ।
ಅಜ್ಞೆಯುದಾಗಲು ಗುರುವಿನದಂದು-ಸುಜ್ಞಾನಿಯಾದನು ಶಿಷ್ಯಾನಂದು ।
ಅಂದು ಗುರು ಹೇಳ್ದಂತೆ ಮಾಡ್ದ-ಸಂದೇಹಳಿದು ಬ್ರಹ್ಮವ ಕೂಡ್ದ ।
ಕೂಡ್ದನು ನಿತ್ಯನಿರಾಳವೆಯಾದ-ಆದ್ದನು ಅಟವ ಪರವೆದುರಾದ[5] ।
ಆವ ಯೋಗಿಯು ಸೃತ ಹೆತ್ತಂತೆ[6]-ಅದನು ಇಷ್ಟುವೆ ಬೆಲ್ಲಾದಂತೆ ।
ಬೆಲ್ಲಾದಂತೆ ಅವನು ಯೋಗಿ-ಸೊಲ್ಲಿಸಲೇನ್ಸಾಕ್ಷಾತ್ಕರವಾಗಿ ।
ಆಗಿಯೆ ಉಂಬನು ನೀರನು ಕೊಂಬ-ಆಗಿಯೆ ಬ್ರಹ್ಮವು [ತಾನೆಡೆಗೊಂಬ ।

1. ಬೇರೆಯಾಗಿರುವ ವಸ್ತು.
2. ನಿನಗಿಂತ ಪುಣ್ಯವಂತರು ಬೇರೆಯವರಿದ್ದಾರೆಯೆ ?
3. ಬೇರೆಯೆಂಬ ಭಾವನೆಗೇ ಬೇರೆ, ತನಗಿಂತ ಬೇರೆಯೆಂಬುದೇ ಇಲ್ಲದವನು.
4. ಮತ್ತೆ.
5. ಸಾಕ್ಷಾತ್ಕಾರವಾದ.

ನೆಡೆಗೊಂಬ(?) ಮುಳುಗುವ ಬ್ರಹ್ಮಾಗಿ-ನುಡಿವನು ನಡೆವನು ತಾನೆ ಆಗಿ
ತಾನೇ ಆಗಿಯೆ ತಿರುಗ್ಯಾಡುವನು-ತಾನೇ ಆಗಿಯೆ ಬೋಧಿಸುತಿಹನು ।
ಬೋಧಿಸುತಿಹನು ಬೇಕಾದರಿಗೆ-ಹಾದಿಯ ಹೋಗನು ಉಳಿದಾದರಿಗೆ ।
ಉಳಿದಾದರಿಗೆ ಬ್ರಹ್ಮವ ತೋರ-ಹೊಳೆವನು ಬಲ್ಲಗೆ ಕರುಣಾಕಾರ ।
ಕರುಣಾಕರ ಆಗಿಪ್ಪಾ ಯೋಗಿ-ಕರದೊಳಗುಂಬನು ಮನೆಮನೆ ಪೋಗಿ।
ಪೋಗಿಯೆ ಉಂಬನು ನೀರನು ಕೊಂಬ-ಆಗರದಾ ಅನ್ನವ ಕೈಕೊಂಬ ।
ಕೈಕೊಂಬ ವಿಧಿನಿಷೇಧ ಅನ್ನ-ಬೈಕೇಳ್ವನು ನಿಂದು ಕರೆದು ಮುನ್ನ ।
ಮುನ್ನ ಜನ್ಮಾಂತರಪಾಪೆಲ್ಲ-ಚೆನ್ನಾಗಿ ಸುಟ್ಟವು ಅಡವ್ಯಂತೆಲ್ಲ ।
ಎಲ್ಲಾ ಮುಕ್ತರು ತಂದೆತಾಯಿಗಳು-ಎಲ್ಲಾ ಮುಕ್ತರು
[ಬಂಧುಬಳಗಗಳು ।
ಬಳಗಗಳೆಲ್ಲ ಮುಕ್ತಿಯ ಹೊಂದೆ-ಬಲು ಮಹಮಹಿಮೆಯು ಆ ಗುರು
[ತಂದೆ ।
ಗುರು ತಂದೆಯು ಹೆಜ್ಜೆಯ ಮುಂದಿಡಲು-ಹರಿವದು ಕರ್ಮವು
[ತೃಣಕಾಷ್ಠಗಳು ।
ಕಾಷ್ಠಗಳೂ ತಾವುತ್ತಮಗತಿಯ-ಎಷ್ಟನು ಹೇಳುವೆ ಮಾಹಾತ್ಮೆಸ್ಥಿತಿಯ।
ಸ್ಥಿತಿಯಾ ನಿರ್ಗುಣದಿಂದಲಿ ನಡೆದು-ಅತಿ ಬೆಳಗಾದನು ಘಟವನು
[ಒಡೆದು ।
ಒಡೆದು ಕಲೆತನು ಪಿಂಡಾಂಡವನು[1]-ಕಿಡಿ ಸುರಿವಾಖಂಡಬ್ರಹ್ಮವನು ।
ಬ್ರಹ್ಮವನು ತಿಳಿಯಲು ಇದ ಕೇಳಿ-ಬ್ರಹ್ಮಾಗುವನು ಸಂತೋಷತಾಳಿ ।
ಸಂತೋಷತಾಳಿದ ಬ್ರಹ್ಮವಿದ್ಯಾ-ಎಂಥವರಿಗೆ ತಾನಿದು ಅಭೇದ್ಯ ।
ಅಭೇದ್ಯಾಗಿಹ ವಿದ್ಯವು ಈದು-ಕಾಂಬೆನೆಂದರಿಗೆ (?) ಇದು
[ದೊರಕಾದು ।
ದೊರಕಾದು ತಾನಿದು ಗರ್ವಾದಿ-ದೊರಕುದು[2] ಜನ್ಮಾಂತರ ಪುಣ್ಯಾದಿ ।
ಪುಣ್ಯಾದಿ ತಾನಿದು ದೊರಕೂವೂದು-ತಣ್ಣಗೆ ಕೇಳಲು ಸಂಪತ್ತಹುದು ।
ಸಂಪತ್ತಹುದು ಭುಕ್ತಿ ಮುಕ್ತಿ-ಸೊಂಪಿಂದಹುದು ಭಕ್ತಿವಿರಕ್ತಿ ।
ವಿರಕ್ತಿಲ್ಲದೆ ಬರಲಿಕೆ ಇಲ್ಲ-ಕಾರಣ ಪುರುಷರು ತಿಳಿವುದು ಎಲ್ಲ ।
ಎಲ್ಲಾ ಜಾತಿಯು ಕೇಳ್ವುದು ಜ್ಞಾನ-ಹೊಲೆಯನು ಆದರೆ
[ಇಲ್ಲನುಮಾನ ।
ಅನುಮಾನುಂಟೆ ಅವನುತ್ತಮನು-ಚಿನುಮಯ ತಾನೆಂದೇ ತಿಳಿದವನು।

1. ಶರೀರವನ್ನು ಒಡೆದು, ದೇಹಪಾತವಾಗಲಾಗಿ, ವಿದೇಹಮುಕ್ತನಾದನು.

ತಿಳಿದವನೂ ಬಾಲಕನೂ ಅಹುದೆ-ಬಾಲಕನಾದರೆ ಬ್ರಹ್ಮವು ಬಹುದೆ ।
ಬಹುದೇ ಸಂಸ್ಕಾರಾವಿಲ್ಲದೆಯು-ಇಹದೇ ಮುಕ್ತಳು ಆ ಸ್ತ್ರೀಗೇಯು ।
ಸ್ತ್ರೀಗೇಯು ಜ್ಞಾನಿಲ್ಲೆನಬಹುದೆ-ನ್ಯಾಯದಿ ಬ್ರಹ್ಮವು ಸ್ತ್ರೀಪುರುಷಹುದೆ
ಅಹುದೇ ದೇಹಭಿಮಾನೀಯಲ್ಲಿ-ಅಹುದು ವಿದ್ಯದ ತನುವೀನಲ್ಲಿ ।
ತನುವೀನಲ್ಲೀ ಸಾಧಿಸಿ ಬಾಳ್ದ-ಚಿನುಮಯ ಚಿದನಂದಾವಧೂತ್ತೇಳ್ದ ।
ಹೇಳ್ದಾ ಈ ಚಿದನಂದಾರಗಳೆ-ಕೇಳ್ದಾ ಸಾಧುಗಳೆಂಬರು ಹೊಗಳೆ ।
ಹೊಗಳೆ ತಾನಿದು ಬ್ರಹ್ಮವೆಂದ-ಮುಗಿಸಿದ ಚಿದನಂದಾಜ್ಞೆಯಿಂದ ।
ಮಂಗಳ ಜಯಜಯ ಮಂಗಳವೆನ್ನಿ-ಮಂಗಳ ಜಯಜಯ
[ಮಂಗಳವೆನ್ನಿ ।

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಚಿದಾನಂದ
ಗುರುವರ್ಯಚರಣಪದ್ಮದ್ವಿರೇಫ ಶ್ರೀಚಿದಾನಂದಾವಧೂತ
ವಿರಚಿತ ಚಿದಾನಂದರಗಳೆ ಸಮಾಪ್ತ.
ಮಂಗಳ ಮಹಾ ಶ್ರೀಶ್ರೀಶ್ರೀ

# ಶ್ರೀಬಗಳಾಬ್ರಹ್ಮೈಕ್ಯಸ್ತೋತ್ರ

ತೋರುತಿರಲು ಶತ್ರುಪದ್ರ[1]-ಏರುತಿರಲು ಮುಖಕೆ ಕೋಪ
ಹಾರುತಿರಲು ಕಣ್ಣ ಕಿಡಿಯು ಚಟಚಟೆನುತಲಿ ।
ಭಾರಿ ಗದೆಯನೆತ್ತಿ ರಕ್ತಕಾರುವಂತೆ ಹೊಡೆದು ಭಕ್ತ
ದ್ವಾರ ಕಾಯ್ದು ಇಹಳು ಚಿದಾನಂದ[2](ಬಗಳ)ದೈವತ ॥ ೧

ಉಟ್ಟು ಪೀತಾಂಬರುಡಿಗೆ ತೊಟ್ಟು ಹೇಮಕಂಚುಕವನು[3]
ಬಿಟ್ಟ ಕಂಗಳಿಂದ ಹಲಗೆ[4] ಪಟ್ಟೆಯೇರಿಸಿ ।
ಬೆಟ್ಟಬೆಟ್ಟಪುಡಿಯಡಾಗೆ–ಅಟ್ಟಿಅಟ್ಟಿ ಅಸುರರನ್ನು
ದಿಟ್ಟ ಬ್ರಹ್ಮಾಸ್ತ್ರ ಚಿದಾನಂದ(ಬಗಳ)ದೈವತ

ಬೆನ್ನಿಗೇಯು ಬತ್ತಳಿಕೆಯು–ಸನ್ನತಾಗಿ ಬಿಗಿದು ಶರವ
ಕೆನ್ನೆಗೇರಿಸುತ್ತ ಚಿನ್ನಶಾರ್ಙ್ಗಯಿಂದಲಿ ।
ಕುನ್ನಿ ನೀಚ ಖಳರ ಎದೆಯ ಬೆನ್ನಿಲುಚ್ಚಳಿಸಲಿಟ್ಟು[5]
ಚೆನ್ನತಾನೆ ನಗುವ ಚಿದಾನಂದ(ಬಗಳ)ದೈವತ ॥ ೩ ॥

ಮುಗುಳುನಗೆಯ ನಗೂತಾಲಿ । ಝುಗಝುಗಾ ಝುಗಿಸುತಾಲಿ
ಅಗಣಿತಾನಂದವಾಗಿ ಸುಗಮಶಾಂತಿಲಿ[6] ।
ದೃಗವ ಮುಚ್ಚಿ ಮಂಗಳಾಂಗಿ ಜಗದಿ ಭಕ್ತರನ್ನು ನೋಡ್ವ
ಧಗಧಗಾ ಧಗಿಪ ಚಿದಾನಂದ(ಬಗಳ)ದೈವತ ॥ ೪ ॥

ತುಡುಕಿ ಅರಿಯ ಜಿಹ್ವೆಯನ್ನು ಹಿಡಿದು ವಾಮಹಸ್ತದಲ್ಲಿ
ಮುಡಿಯ ಮಂಡೆಯಿಂದ[7] ಕಣ್ಣುಕಿಡಿಯು ಏಳುತ ।
ಬಡಿದು ಖಡ್ಗನವಡು ಕಚ್ಚಿ । ಹೊಡೆದು ತಲೆಯ ಹೋ ಎಂದು
ಮೃಡೆ ಉಘೇ[8] ? ಎನಿಪ ದುರ್ಗೆ[9] ಚಿದಾನಂದ(ಬಗಳ)ದೈವತ ॥ ೫ ॥

1. ಶತ್ರುಗಳ ಉಪದ್ರವ.
2. ಕಂಸದಲ್ಲಿಟ್ಟ ಪದವು ಹೆಚ್ಚೆಂದು ತೋರುತ್ತದೆ; ಪೀಠಿಕೆಯನ್ನು ನೋಡಿ.
3. ಚಿನ್ನದ ಕುಪ್ಪಸವನ್ನು.
4. ಗುರಾಣಿ.
5. ಹೊರಕ್ಕೆ ಬರುವಂತೆ ಬಾಣವನ್ನು ಹೊಡೆದು.
6. ಸುಲಭವಾಗಿ ಕಾಣುವ ಶಾಂತಿಯಿಂದ.
7. ಶತ್ರುಗಳ ನಾಲಗೆಯನ್ನು ಎಳೆದುಕೊಂಡು, ತಲೆಯಮೇಲಿನ ಜುಟ್ಟನ್ನು ಹಿಡಿದು.
8. ಜಯಜಯವೆನಿಸುವ.

ಚಳ್ಳತುಂಬು[1] ರಾಗಟೆಯು | ಮುಳ್ಳುಗೆಜ್ಜೆ[2] ಕಾಲುಂಕಡಗ
ಬೆಳ್ಳಿಬಳೆಯು ಕಂಕಣವು | ಘಲ್ಲೆನಲು ಹೊಳೆಯುತ |
ಗಲ್ಲಮುಚ್ಚೆ ಮುತ್ತಿನೋಲೆ[3] | ಮಲ್ಲಿಗೆಯ ಮುಡಿಯಲಿಂದ
ಎಲ್ಲ ಶಾಂತಳಾದ ಚಿದಾನಂದ(ಬಗಳ)ದೈವತ || ೬ ||

ಶಿಶುವಿನಾ ಚಿಂತೆ ತಾಯಿ | ಎಸಗುವಂತೆ ಭಕ್ತರುಗಳ
ನೊಸೆದು ಕಾಯ್ದಿರುತ ನಾನಾ | ದುಸಮಾನರ[4] ಸೀಳಿಯೆ |
ಹಸಿವುನೀರಡಿಕೆ ಅಡಗಿ | ಖುಷಿಯ ಬಡುತ ಖ್ಯಾಲ[5]ಮ್ಯಾಳ
ದೆಸಕದಿರುವ ಚಿದಾನಂದ(ಬಗಳ)ದೈವತ || ೭ ||

ಜ್ಞಾನಿಗಳ ಮನೆಗಳಲ್ಲಿ | ತಾನೆ ಅನ್ನಪೂರ್ಣೆಯಾಗಿ
ಏನುಕೆಲಸ[6] ತನ್ನದಾಗಿ | ಮಾನಕೊಡೆಯಳಾಗಿಯೆ |
ತಾನು ಮಾತ್ರ ದೈವತಾಗಿ | ತನ್ನ ಮನದಿ ಭಕ್ತರುಗಳ
ಧ್ಯಾನಮಾಡುತಿರ್ಪ ಚಿದಾನಂದ(ಬಗಳ)ದೈವತ || ೮ ||

ಒಮ್ಮೆ ನೆನೆಯಲೊಮ್ಮೆ ನೆನೆವೆ | ಒಮ್ಮೆ ಸ್ತುತಿಸಲೊಮ್ಮೆ ಸ್ತುತಿಪೆ
ಒಮ್ಮೆ ಕೂಗಿದರೆ ಮತ್ತೊಮ್ಮೆ ಕೂಗುವೆ |
ಅಮ್ಮ ನೀನು ಭಕ್ತದ್ವಾರ | ಸುಮ್ಮಗೆಯು[7] ಕಾಯ್ವೆ ಪರ
ಬ್ರಹ್ಮ ಸತ್ಯಳೆನಿಪ ಚಿದಾನಂದ(ಬಗಳ)ದೈವತ || ೯ ||

ನಿನ್ನ ಪ್ರಾಣ ಭಕ್ತಪ್ರಾಣ | ನಿನ್ನ ತನುವು ಭಕ್ತತನುವು
ನಿನ್ನ ಜೀವ ಭಕ್ತಜೀವ | ಸತ್ಯಸತ್ಯವಾಗಿಯೆ |
ನಿನ್ನ ದಯಕೆ ಸರಿಯದುಂಟೆ | ನಿನ್ನ ಭಜಿಪಗೆಣೆಯದುಂಟೆ ?
ಇನ್ನು ಅವನು ನೀನೆ ಚಿದಾನಂದ(ಬಗಳ)ದೈವತ || ೧೦ ||

ಸತ್ಯವಾದ ಭಕ್ತರಲ್ಲಿ | ತೊತ್ತು[8]ಗೆಲಸವನ್ನು ಮಾಳ್ಪೆ
ಪೃಥ್ವಿಗೀಶಳೆಂಬ ನಾಮ | ವ್ಯರ್ಥ ಕಳೆದೆಯ?
ಮತ್ತೆ ನಿನಗೆ ನೀತಿಯಿಲ್ಲ | ಕರ್ತೃ ನಾಮ ಹೋಯಿತಲ್ಲ
ನಿತ್ಯ ಆತ್ಮಳಾದ ಚಿದಾನಂದ(ಬಗಳ)ದೈವತ || ೧೧ ||

---

1. ಚಳತುಂಬು.    2. ಉಡುಗೆಜ್ಜೆ ?
3. ಮುತ್ತಿನ ಓಲೆ ಹೊಳಪಿನಿಂದ ಕೆನ್ನೆಯನ್ನು ಮುಚ್ಚುತ್ತಿರಲು.
4. ದುಷ್ಟಮಾನವರನ್ನು, ದುಷ್ಟರನ್ನು.
5. ಖೇಲ, ಹಿಂದಕ್ಕೂ ಮುಂದಕ್ಕೂ ತೂಗಾಡು ಎಂಬರ್ಥದ ಮಾತಿರಬಹುದೆ ?
6. ಯಾವ ಕೆಲಸವಾದರೂ.

ಎನ್ನ ಕಾಲು ನಿನ್ನ ಕಾಲು । ಎನ್ನ ದೇಹ ನಿನ್ನ ದೇಹ
ಎನ್ನ ಜೀವ ನಿನ್ನ ಜೀವ । ಸತ್ಯಸತ್ಯವಾಗಿಯೆ ।
ಇನ್ನು ನೀನು ನಾನೆ ಆಗಿ । ನಿನ್ನ ಬೇರೆ ಹೇಳ್ವದೆಲ್ಲಿ ?
ಮಾನ್ಯಳಾದೆ ಜಗಕೆ ಚಿದಾನಂದ(ಬಗಳ)ದೈವತೆ || ೧೨ ||

ನೀನು ನಾನಾಗಿ ಉಣಲು । ನೀನು ಆಗಿ ಕೈಯ ತೊಳೆಯೆ
ನೀನು ನಾನು ಆಗಿಯೇ । ನಡೆದು ಆಡುತ ।
ನೀನು ಆಗಿ ನಾನು ನೋಡೆ । ನೀನು ಆಗಿ ಮಾತನಾಡೆ
ನೀನು ನಾನೆ ಚಿದಾನಂದ(ಬಗಳ)ದೈವತೆ || ೧೩ ||

ಕನ್ನಡಿಯೊಳು ಹೊನ್ನುಗಂಟು । ಇನ್ನು ಇದ್ದೂ ಇಲ್ಲದಂತೆ
ಚೆನ್ನ ಸಂಸರದಲಿದ್ದು[1] । ಭಿನ್ನವಿರುತಲಿ ।
ಚೆನ್ನಗೀಯೆ[2] ಕರ್ಮನಡೆಸಿ । ಸನ್ನುತಾತ್ಮಳಾದ ಸಂ-
ಪನ್ನ ಸತ್ಕರ್ಮಿ ಚಿದಾನಂದ(ಬಗಳ)ದೈವತ || ೧೪ ||

ವ್ರತವನೀಗ ತಪ್ಪಗೊಡದೆ । ಮತವನೀಗ ಕೆಡಲುಗೊಡದೆ
ಯತಿಯು ದೇವಬ್ರಾಹ್ಮಣರುಗಳ । ಸತತ ಪೂಜೆಮಾಡುವ ।
ರತಿಯು ಬ್ರಹ್ಮದಲ್ಲಿ ಇಟ್ಟು । ಗತಿಯ ಹೊಂದುವನು ಸುಮತಿ
ಸತತಕರ್ಮಿ ಚಿದಾನಂದ(ಬಗಳ)ದೈವತ || ೧೫ ||

ಒಂದೆ ಪಟವು ತಂತ್ವನೇಕ । ಒಂದೆ ಸ್ವರ್ಣ ನೈಕ ಒಡವೆ
ಒಂದೆ ಲೋಹ ನೈಕಶಸ್ತ್ರ । ಸಂದುರಂತೆವೊಲ್
ಒಂದೆ ಬ್ರಹ್ಮ ನಾನಾ ಜಗವು । ಒಂದೆ ಸರ್ವ ಎಂದು ತಿಳಿದು
ಒಂದೆಯಾದಾತ ಚಿದಾನಂದ(ಬಗಳ)ದೈವತ || ೧೬ ||

ಒತ್ತಿ ಮಡವ ಗುದವನೀಗ । ಹತ್ತಿ ಆರು ಚಕ್ರನೆಲೆಯ
ಕತ್ತಲನ್ನು ಕಳೆದು ಮುಂದೆ । ಅತ್ತ ಸಾಗಿಯೆ ।
ಸುತ್ತುತಿರುವ ಕಳೆಯ ಕಾಣು । ಕತ್ತೆ ಬೆಳಕು ಬೆಳಕೆ ಆಗೆ
ನೆತ್ತಿಗೇರಿದಾತ[3] ಚಿದಾನಂದ(ಬಗಳ)ದೈವತ || ೧೭ ||

1. ಸಂಸಾರದಲ್ಲಿದ್ದು.
2. ಚೆನ್ನಾಗಿಯೇ.

ತನುವು ಒಲಿಯದಾಲಿ ನೆಟ್ಟು[1] । ಅನುನಯಾದಿ ಕುಳಿತು ಮೂಗ
ಕೊನೆಯ ಮೇಲೆ ಭ್ರೂಮಧ್ಯ । ಮನೆಯ ನೋಡುತ ।
ಕನಕಹೂಗಳನ್ನು ಚೆಲ್ಲಿ । ಘನವು ಘನದ ಮುತ್ತು ಉದುರೆ
ಚಿನುಮಯಾತ್ಮಳಾದ ಚಿದಾನಂದ(ಬಗಳೆ)ದೈವತೆ || ೧೮ ||

ಬಂಧತ್ರಯಗಳನ್ನು (?) ಹಿಡಿದು । ಬಂಧಿಸಿಯೆ ಸರ್ವನಾಡಿ
ಒಂದು ಎರಡು ನಿತ್ಯಹೆಚ್ಚು ತಂದು ಪ್ರಣವವ ।
ಮುಂದೆ ಸೌಷುವನ್ನು ಹೊಕ್ಕು । ಚಂದ್ರಮಾನು ಕರಗಿ ಅಮೃತ
ಬಿಂದು ಉಂಬನಾತ ಚಿದಾನಂದ(ಬಗಳೆ)ದೈವತೆ || ೧೯ ||

ತುಂಬಿತುಂಬಿ ಎಳೆದು ವಾಯು । ಕುಂಭವನ್ನ ಬಿಗಿದು ನಾಳ
ಕಂಭಸೂತ್ರಕ್ಕೆ ಬಹಳ । ಕುಂಭ(?)ಧ್ವನಿಯ ಕೇಳುತ ।
ಅಂಬರವನೆ ನೋಡಿ ಗಗನ । ತುಂಬ ಮುತ್ತು ಚಂಡು ಉದುರೆ
ಶಂಭು ತಾನೆ ಆದ ಚಿದಾನಂದ(ಬಗಳೆ)ದೈವತೆ || ೨೦ ||

ನಾಗಸ್ವರವು ಎನಿಪ ನಾದ । ಕೂಗುತಿರಲು ಸರ್ವಕಾಲ
ತೂಗುತಲಿ ಆನಂದ । ದುದಯವಾಗಿಯೆ ।
ನೀಗಿ ಸರ್ವವಿಷಯಗಳನು । ಆಗುಹೋಗು ಎಂಬುದಳಿದು
ಯೋಗಿರಾಜನಾದ ಚಿದಾನಂದ(ಬಗಳೆ)ದೈವತೆ || ೨೧ ||

ತ್ಯಕ್ತಮಾಡಿ ವಿಷಯವನ್ನಾ । ಸಕ್ತನಾಗಿ ಬ್ರಹ್ಮದಲ್ಲಿ
ಯುಕ್ತಿಯಿಂದ ಲಕ್ಷ್ಯವನ್ನು । ಶಕ್ತನಾಗಿ ಸಾಧಿಸಿ ।
ಶಕ್ತಿಜಾತ ಗೊಂಚಲುದುರೆ ಮುಕ್ತಿಮುಂಟಪದೆ ಶುದ್ಧ
ಭಕ್ತನೇರ್ದ ನಾದ ಚಿದಾನಂದ(ಬಗಳೆ)ದೈವತೆ || ೨೨ ||

ಕಣ್ಣಿನೊಳು ಕಣ್ಣ ಇಟ್ಟು । ಕಣ್ಣುಬೊಂಬೆಯಾಗಿ ನಿಂತು
ಕಣ್ಣಿನೊಳು ನಾನಾಬೆಳಕು । ಕಡೆಯು ಇಲ್ಲವಾಗಿಯೆ ।
ಹುಣ್ಣಿಮೆಯಂತೆ[2] ಬೆಳಕು ತುಂಬಿ । ಹೊರಗು ಒಳಗು ಎಲ್ಲ ಮರೆತು
ತನ್ನತನದಿ ಆದ ಚಿದಾನಂದ(ಬಗಳೆ)ದೈವತೆ || ೨೩ ||

ಇರಳು ಹಗಲು ಎಂಬುದಡಗಿ । ಹೊರಗು ಒಳಗು ಎಂಬುದಡಗಿ
ಇರವಿನಲ್ಲಿ ಎಲ್ಲವಡಗಿ । ಗುರಿಯು ಗುರುತು ಅಡಗಿರೆ ।
ಅರಿವು ಮರವು ಎಂಬುದಡಗಿ । (ಬರಿಯ ಅರಿವು ತಾನೆ ಆಗೆ?)
ಪರಮಶುದ್ಧಳಹ ಚಿದಾನಂದ(ಬಗಳೆ)ದೈವತೆ || ೨೪ ||

1. ಶರೀರವನ್ನು ಅಲುಗಾಡಿಸದೆ, ಕಣ್ಣು ದೃಷ್ಟಿಯನ್ನು ಒಂದೇ ಕಡೆಯಲ್ಲಿ ನೆಟ್ಟು.

ಬ್ರಹ್ಮವಾಗಿ ನಿಂತು ನಡೆದು । ಬ್ರಹ್ಮವಾಗಿ ಕುಳಿತು ಮಲಗಿ ।
ಬ್ರಹ್ಮವಾಗಿ ಕಣ್ಣ ತೆರೆದು । ಬ್ರಹ್ಮವಾಗಿ ಮುಚ್ಚಿಯೆ ।
ಬ್ರಹ್ಮವಾಗಿ ಮೈಯ ತೊಳೆದು । ಬ್ರಹ್ಮವಾಗಿ ಉಂಡು ಪರ
ಬ್ರಹ್ಮ ತಾನೆಯಾದ ಚಿದಾನಂದ(ಬಗಳ)ದೈವತೆ ॥ ೨೫ ॥

# ಅಧ್ಯಾತ್ಮಪ್ರಕಾಶಕಾರ್ಯಾಲಯ,
# ಹೊಳೆನರಸೀಪುರ.

## ಈ ಕಾರ್ಯಾಲಯದಿಂದ
## ತಾವು ಯಾವಯಾವ ಲಾಭವನ್ನು ಪಡೆಯಬಹುದು ?

೧. ಕಾರ್ಯಾಲಯದಲ್ಲಿ ನಡೆಯುತ್ತಿರುವ ಪೂಜೆ, ಭಜನೆ, ಪುರಾಣಶ್ರವಣ, ಉಪನ್ಯಾಸ, ಅನುಷ್ಠಾನ– ಮುಂತಾದವುಗಳಲ್ಲಿ ಯಥೋಚಿತವಾಗಿ ಭಾಗವನ್ನು ವಹಿಸಿ ಮನಸ್ಸಿಗೆ ಅಧ್ಯಾತ್ಮಸಂಸ್ಕಾರವನ್ನು ಮಾಡಿಕೊಳ್ಳಬಹುದು.

೨. ಕಾರ್ಯಾಲಯದಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯವಾದ ಗ್ರಂಥಗಳನ್ನು ಓದಿ ಬುದ್ಧಿವಿಕಾಸವನ್ನು ಪಡೆಯಬಹುದು.

೩. ಕಾರ್ಯಾಲಯವಲ್ಲಿರುವ ವಿದ್ಯಾನಿಲಯಕ್ಕೆ ನಿಮ್ಮ ಕಡೆಯಲ್ಲಿರುವ ಮತತ್ರಯದ ಬ್ರಾಹ್ಮಣವಿದ್ಯಾರ್ಥಿಗಳನ್ನು ಕಳುಹಿಸಿಕೊಟ್ಟು ಪ್ರಾಚ್ಯಪಾಶ್ಚಾತ್ಯತತ್ತ್ವಶಾಸ್ತ್ರಗಳಲ್ಲಿ ಪ್ರವೀಣರನ್ನಾಗಿ ಮಾಡಿಸಿ ನಿಮ್ಮ ಪ್ರಾಂತದಲ್ಲಿ ಅವರಿಂದ ಅಧ್ಯಾತ್ಮವಿದ್ಯಾಪ್ರಸಾರವನ್ನು ಮಾಡಿಸುವ ಸೌಭಾಗ್ಯವನ್ನು ಪಡೆಯಬಹುದು.

೪. ಕಾರ್ಯಾಲಯದಲ್ಲಿ ಪ್ರಕಟವಾಗುವ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಗೆ ಚಂದಾದಾರರಾಗುವದು, ಚಂದಾದಾರರನ್ನು ಒದಗಿಸುವದು– ಈ ಮೂಲಕ ಕಾರ್ಯಾಲಯದ ಕೆಲಸಗಳಲ್ಲಿ ಭಾಗಿಗಳಾಗಿ ನೀವೂ ತಿಂಗಳುತಿಂಗಳು ಅಧ್ಯಾತ್ಮಬೋಧೆಯನ್ನು ಪಡೆಯಬಹುದು.

೫. ಕಾರ್ಯಾಲಯದಲ್ಲಿ ಸಿದ್ಧವಾಗುತ್ತಿರುವ ಮತತ್ರಯಸಿದ್ಧಾಂತಗಳ ಸಣ್ಣಪುಟ್ಟ ಗ್ರಂಥಗಳ ಪ್ರಕಟನೆಗೆ ಯಥಾಶಕ್ತಿ ಯಥೋಚಿತವಾಗಿ ಧನಸಹಾಯವನ್ನು ಮಾಡಿ ಮಹಾಶ್ರಯದಾತರು, ಆಶ್ರಯದಾತರು, ಮಹಾಪೋಷಕರು ಅಥವಾ ಪೋಷಕರು– ಎನಿಸಿ ಈ ಪುಸ್ತಕಗಳ ಭಂಡಾರವೊಂದನ್ನು ಏರ್ಪಡಿಸಿಕೊಳ್ಳಬಹುದು.

೬. ಕಾರ್ಯಾಲಯದ ಮೇಲೆಕಂಡ ಚಟುವಟಿಕೆಗಳೇ ಅಲ್ಲದೆ ಕಟ್ಟಡ, ವಿದ್ಯಾರ್ಥಿನಿಲಯ, ಪೂಜಾಮಂದಿರ– ಇವುಗಳ ಅಭಿವೃದ್ಧಿಗೆ ಯಥೋಚಿತ ಸಹಾಯವನ್ನು ಮಾಡಿ ಪುಣ್ಯವನ್ನು ಸಂಪಾದಿಸಿಕೊಳ್ಳಬಹುದು.

ಹೆಚ್ಚಿನ ವಿವರಕ್ಕೆ ಬರೆದು ಕೇಳಿರಿ.

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.